ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂ.ಬಿಸಿಯು/ವಿವಿಪ/ಅಸಾಮಾನ್ಯ ಸಭೆ/320/2023-24 ದಿನಾಂಕ: 06.03.2024

ಗೆ,
ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ,

ವಿಷಯ: ದಿನಾಂಕ. 27.02.2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 27.02.2024 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2 ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ,
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂಖ್ಯೆ:ಬೆಂ.ನ.ವಿ/ವಿವಿಪ/ಅಸಾಮಾನ್ಯ/320 /2023–24 ದಿನಾಂಕ: 06.03.2024.

ದಿನಾಂಕ 27.02.2024 ರಂದು ಪೂರ್ವಾಹ್ನ 11.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.

ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ | ಸಭಾಧ್ಯಕ್ಷರು |
| 2. | ಶ್ರೀ ಎಸ್. ಕೇಶವ ಪ್ರಸಾದ್ | ಸದಸ್ಯರು |
| 3. | ಶ್ರೀ ರಮೇಶ್ ನಾರಾಯಣ್ ರಾವ್ | ಸದಸ್ಯರು |
| 4. | ಡಾ. ಪ್ರೇಮ | ಸದಸ್ಯರು |
| 5. | ಶ್ರೀ ಪಂಕಜ್ ಚೌಧರಿ | ಸದಸ್ಯರು |
| 6. | ಪ್ರೊ. ಸುಮಯಾ ಫಾತಿಮಾ | ಸದಸ್ಯರು |
| 7. | ಡಾ. ಎಂ. ಆರ್. ಲಕ್ಷ್ಮೀನಾರಾಯಣನ್ | ಸದಸ್ಯರು |
| 8. | ಡಾ. ಎಲಿಝಾಬತ್ ಜಾಸ್ಮಿನ್ | ಸದಸ್ಯರು |
| 9. | ಶ್ರೀಮತಿ. ಡಿ. ಆರ್ ಸುಧಾ | ಸದಸ್ಯರು |
| 10. | ಡಾ. ಮಹೇಶ್ ಕುಮಾರ್ ಕೆ. ಆರ್. | ಸದಸ್ಯರು |
| 11. | ಡಾ. ಎನ್. ಅರುಂಧತಿ | ಸದಸ್ಯರು |
| 12. | ಡಾ. ಎಸ್. ನಾಗರಾಜ್ | ಸದಸ್ಯರು |
| 13. | ಡಾ. ಕೆ. ಶಿವಶಂಕರ | ಸದಸ್ಯರು |
| 14. | ಡಾ. ಎಂ. ಪಾಂಡುರಂಗಪ್ಪ | ಸದಸ್ಯರು |
| 15. | ಡಾ. ಪಿ.ಆರ್. ಚೇತನ | ಸದಸ್ಯರು |
| 16. | ಡಾ.ವಿ.ಆರ್.ದೇವರಾಜ್ | ಸದಸ್ಯರು |
| 17. | ಡಾ. ಎಸ್ ಹರಿಪ್ರಸಾದ್ | ಸದಸ್ಯರು |
| 18. | ಡಾ. ಜ್ಯೋತಿ ವೆಂಕಟೇಶ್ | ಸದಸ್ಯರು |
| 19. | ಡಾ. ಕೆ. ಆರ್. ಜಲಜಾ | ಸದಸ್ಯರು |
| 20. | ಶ್ರೀಮತಿ. ವಿಜಯಲಕ್ಷ್ಮೀ ಎಂ.ವಿ<br>ವಿತ್ತಾಧಿಕಾರಿಗಳು | ಸದಸ್ಯರು |
| 21. | ಡಾ. ಆನಂದ ಕುಮಾರ್ ಸಿ.ಎಸ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 22. | ಶ್ರೀ ಜವರೇಗೌಡ ಟಿ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ<br>ಕಾರ್ಯದರ್ಶಿಗಳು |

ಕೋರಂ ಅಭಾವದಿಂದಾಗಿ ಸಭಾಧ್ಯಕ್ಷರು, ಸಭೆಯನ್ನು 10 ನಿಮಿಷಗಳ ಕಾಲ ಮುಂದೂಡಿದರು 11.40ಕ್ಕೆ ಮುಂದೂಡಲಾದ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯ ಪ್ರಾರಂಭದಲ್ಲಿ ವಿದ್ಯಾವಿಷಯಕ ಪರಿಷತ್ ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರು ಉಪಸ್ಥಿತರಿದ್ದ ಎಲ್ಲ ಸದಸ್ಯರನ್ನು ಸ್ವಾಗತಿಸಿ ಪ್ರಸ್ತಾವಿಕ ನುಡಿಗಳೊಂದಿಗೆ ಸಭೆಗೆ ಚಾಲನೆ ನೀಡಲು ಮಾನ್ಯ ಕುಲಪತಿಗಳನ್ನು ವಿನಂತಿಸಿದರು.

ಮಾನ್ಯ ಕುಲಪತಿಗಳು ಎಲ್ಲ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿ, ಸದಸ್ಯತ್ವದ ಅವಧಿ ಪೂರ್ಣಗೊಳಿಸಿದ ಪ್ರಾಚಾರ್ಯರಾದ ಡಾ. ಎಸ್. ಎನ್. ವೆಂಕಟೇಶ್ ಮತ್ತು ಡಾ. ಸಿ. ಎಂ. ನವೀನ್‌ಕುಮಾರ್ ಅವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಗುವುದು ಎಂದು ಹೇಳಿದರು. ಅವರ ಸ್ಥಾನದಲ್ಲಿ ಡಾ. ಎನ್. ಅರುಂಧತಿ, ಪ್ರಾಚಾರ್ಯರು ದಿ ಆಕ್ಸ್‌ಫರ್ಡ್ ಕಾಲೇಜ್ ಆಫ್ ಎಜುಕೇಷನ್ ಮತ್ತು ಡಾ. ಎಸ್. ನಾಗರಾಜ್ ಪ್ರಾಚಾರ್ಯರು ಪ್ರಯುಕ್ತಿ ಇಂಟರ್‌ನ್ಯಾಷನಲ್ ಕಾಲೇಜ್‌ರವರನ್ನು ಪ್ರಾಂಶುಪಾಲರ ಜೇಷ್ಠತೆ ಮತ್ತು ಸರದಿಯ ಆಧಾರದ ಮೇಲೆ ಸದಸ್ಯರನ್ನಾಗಿ ದಿನಾಂಕ 29.12.2023 ರಂದು ನಾಮನಿರ್ದೇಶನ ಮಾಡಲಾಗಿದೆ ಎಂದು ಹೇಳಿ, ಅವರನ್ನು ಸಭೆಗೆ ಸ್ವಾಗತಿಸಿದರು.

ಕರ್ನಾಟಕ ವಿಧಾನಪರಿಷತ್ತಿನ ಸಭಾಧ್ಯಕ್ಷರು, ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಬಿ.ಕೆ. ಹರಿಪ್ರಸಾದ್‌ರವರನ್ನು ಹಾಗೂ ಕರ್ನಾಟಕ ವಿಧಾನಸಭೆ ಸಭಾಧ್ಯಕ್ಷರು ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ಸದಸ್ಯರಾದ ಶ್ರೀ ಉದಯ ಬಿ ಗರುಡಾಚಾರ್‌ರವರನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುತ್ತಾರೆ. ಅದರಂತೆ ದಿನಾಂಕ 23.02.2024 ರಂದು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿ ಅಧಿಸೂಚನೆ ಹೊರಡಿಸಲಾಗಿದೆ ಎಂದು ಹೇಳಿ ಅವರ ಅನುಪಸ್ಥಿತಿಯಲ್ಲಿ ಅವರನ್ನು ಸ್ವಾಗತಿಸಿದರು.

ನಂತರ ಕಳೆದ ವಿದ್ಯಾವಿಷಯಕ ಪರಿಷತ್ ಸಭೆಯಿಂದ ಇಲ್ಲಿಯವರೆಗೆ ವಿಶ್ವವಿದ್ಯಾನಿಲಯದಲ್ಲಿ ಜರುಗಿದ ವಿವಿಧ ಚಟುವಟಿಕೆಗಳ ಕುರಿತು ಕೆಳಗಿನಂತೆ ವರದಿಯನ್ನು ಮಂಡಿಸಿದರು.

1. ದಿನಾಂಕ 24.11.2023 ರಂದು ಕರ್ನಾಟಕ ರಾಜ್ಯೋತ್ಸವವನ್ನು ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಚರಿಸಲಾಯಿತು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ಹೆಸರಾಂತ ಕವಿಗಳು, ನಾಟಕಕಾರರು, ಕೇಂದ್ರ ಸಾಹಿತ್ಯ ಅಕಾಡೆಮಿಯ ವಿಶ್ರಾಂತ ಅಧ್ಯಕ್ಷರೂ ಆಗಿರುವ ನಾಡೋಜ ಡಾ. ಚಂದ್ರಶೇಖರ ಕಂಬಾರರವರು ಸಮಾರಂಭದ ಉದ್ಘಾಟನೆ ಮಾಡಿದರು. ಜನಪ್ರಿಯ ಚಲನಚಿತ್ರ ಗೀತ ಸಾಹಿತಿಗಳು ಹಾಗೂ ಸಂಗೀತ ಸಂಯೋಜಕರಾದ ಕವಿರತ್ನ ಡಾ. ವಿ. ನಾಗೇಂದ್ರ ಪ್ರಸಾದ್ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು. ಇದೇ ಸಂದರ್ಭದಲ್ಲಿ ಟಿ.ವಿ. ಮನರಂಜನಾ ಕಾರ್ಯಕ್ರಮಗಳ ಬಾಲ ಕಲಾವಿದರಾದ ವನ್ಷಿಕಾ ಅಂಜನಿ ಕಶ್ಯಪ್ ಮತ್ತು ಮಹಿತ.ವಿ. ರವರಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

2. 26.11.2023 ರಂದು ವಿಶ್ವವಿದ್ಯಾನಿಲಯದಲ್ಲಿ ಸಂವಿಧಾನ ದಿನಾಚರಣೆಯನ್ನು ಆಚರಿಸಲಾಯಿತು. ಉಪಸ್ಥಿತರಿದ್ದ ವಿದ್ಯಾರ್ಥಿ, ಸಿಬ್ಬಂದಿ, ಅಧ್ಯಾಪಕರುಗಳಿಗೆ ಸಂವಿಧಾನದ ಪೀಠಿಕೆಯನ್ನು ಬೋಧಿಸಲಾಯಿತು.

3. 01.12.2023 ರಂದು ಭಾರತ ಸರ್ಕಾರದ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ನೆಹರು ಯುವ ಕೇಂದ್ರ ಸಂಘಟನೆ, ರಾಜ್ಯ ಎನ್.ಎಸ್.ಎಸ್. ಕೋಶಗಳ ಸಹಯೋಗದಲ್ಲಿ, ರಾಜ್ಯ ಯುವ ಉತ್ಸವದ ಉದ್ಘಾಟನಾ ಸಮಾರಂಭ ಜ್ಞಾನಜ್ಯೋತಿ ಸಭಾಂಗಣದಲ್ಲಿ ಜರುಗಿತು. ಕೇಂದ್ರ ಸರ್ಕಾರದ ರಸಾಯನಿಕ, ರಸಗೊಬ್ಬರ, ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವರಾದ ಶ್ರೀ ಭಗವಂತ ಖೂಬ ರವರು ಉದ್ಘಾಟನೆ ಮಾಡಿದರು.

4. ದಿನಾಂಕ 6.12.2023ರಂದು ಡಾ. ಬಿ.ಆರ್. ಅಂಬೇಡ್ಕರ್ ರವರ ಪರಿನಿರ್ವಾಣ ದಿನವನ್ನು ಆಚರಿಸಲಾಯಿತು.

5. ದಿನಾಂಕ 07.12.2023 ರಂದು ರಾಜ್ಯ ಶಿಕ್ಷಣ ನೀತಿ ಆಯೋಗದ ವಿನಂತಿಯ ಮೇರೆಗೆ, ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸುವಲ್ಲಿ ಸವಾಲುಗಳ ಕುರಿತು ಬೆಂಗಳೂರು ವಲಯದ ಹತ್ತು ವಿಶ್ವವಿದ್ಯಾನಿಲಯಗಳ ಕುಲಪತಿಗಳು, ವಿಶ್ರಾಂತ ಕುಲಪತಿಗಳ ಸಂಘದ ಪ್ರತಿನಿಧಿಗಳು, ಪ್ರತಿ ವಿಶ್ವವಿದ್ಯಾನಿಲಯದ ಆಯ್ದ ಪ್ರಾಂಶುಪಾಲರುಗಳು, ವಿಶ್ವವಿದ್ಯಾಲಯಗಳ ಅಧ್ಯಾಪಕರ ಸಂಘ, ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘ, ಖಾಸಗಿ ಕಾಲೇಜುಗಳ ಅಧ್ಯಾಪಕರ ಸಂಘದ ಪದಾಧಿಕಾರಿಗಳ, ವಿದ್ಯಾರ್ಥಿ ಸಂಘಟನೆಗಳ ಪ್ರತಿನಿಧಿಗಳ ಸಭೆಯಯನ್ನು ಜ್ಞಾನಜ್ಯೋತಿ ಸಭಾಂಗಣದ ಸೆಮಿನಾರ್ ಹಾಲ್ ನಲ್ಲಿ ಜರುಗಿತು. ಈ ಸಭೆಯಲ್ಲಿ, ರಾಜ್ಯ ಶಿಕ್ಷಣ ನೀತಿ ಆಯೋಗ ಸರ್ಕಾರಕ್ಕೆ ಸಲ್ಲಿಸಬೇಕಾಗಿರುವ ಮಧ್ಯಂತರ ವರದಿ ಕುರಿತು ಸಭೆಯಲ್ಲಿ ಹಾಜರಿದ್ದ ಪ್ರತಿನಿಧಿಗಳಿಂದ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು. ರಾಜ್ಯ ಶಿಕ್ಷಣ ನೀತಿ ಆಯೋಗದ ಅಧ್ಯಕ್ಷರಾದ ಪ್ರೊ. ಸುಖದೇವ್ ಥೋರಟ್ ರವರು ಆನ್ ಲೈನ್ ನಲ್ಲಿ ಉಪಸ್ಥಿತರಿದ್ದು ಪ್ರಸ್ತಾವಿಕವಾಗಿ ಮಾತನಾಡಿದರು. ಆಯೋಗದ ಸದಸ್ಯರು ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಎಸ್. ಜಾಫೆಟ್ ರವರು ಸಭೆಯನ್ನು ನಿರ್ವಹಿಸಿದರು.

6. ದಿನಾಂಕ 8.12.2023ರಂದು ವಿಶ್ವವಿದ್ಯಾನಿಲಯದ ರಾಜ್ಯ ಶಾಸ್ತ್ರ ವಿಭಾಗ ಮತ್ತು ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗಗಳು ಆಯೋಜಿಸಿದ ಕಾರ್ಯಕ್ರಮದಲ್ಲಿ "Freedom of Speech and Expression in Contemporary India" ವಿಷಯ ಕುರಿತು ಶ್ರೀ ಆಕಾರ ಪಟೇಲ್, ಆಮ್ನೆಸ್ಟಿ ಇಂಟರ್ ನ್ಯಾಷನಲ್ ಇನ್ ಇಂಡಿಯಾ ಸಂಸ್ಥೆಯ ಮುಖ್ಯಸ್ಥರು ಉಪನ್ಯಾಸ ನೀಡಿದರು.

7. ದಿನಾಂಕ 19.12.2023 ರಂದು ವಿಶ್ವವಿದ್ಯಾನಿಲಯದ 5ನೇ ಅಂತರ ಮಹಾವಿದ್ಯಾಲಯಗಳ ಕ್ರೀಡಾಕೂಟದ ಉದ್ಘಾಟನೆಯನ್ನು ನಗರದ ಕಂಠೀರವ ಕ್ರೀಡಾಂಗಣದಲ್ಲಿ ಜರುಗಿಸಲಾಯಿತು.

8. ಕನ್ನಡ ಅಧ್ಯಯನ ವಿಭಾಗದ ವತಿಯಿಂದ ದಿನಾಂಕ 29.12.2023ರಂದು ರಾಷ್ಟ್ರಕವಿ ಕುವೆಂಪು ರವರ 119ನೇ ಜನ್ಮ ದಿನಾಚರಣೆ ಪ್ರಯುಕ್ತ "ವಿಶ್ವಮಾನವ ದಿನಾಚರಣೆ" ಯನ್ನು ಆಚರಿಸಲಾಯಿತು. ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರು ಹಾಗೂ ಕುಪ್ಪಳ್ಳಿಯ ಕುವೆಂಪು ಕನ್ನಡ ಆಧ್ಯಯನ ಕೇಂದ್ರದ ಮಾಜಿ ನಿರ್ದೇಶಕರಾದ ಡಾ. ಕೆ.ಸಿ. ಶಿವಾರೆಡ್ಡಿ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಉಪನ್ಯಾಸ ನೀಡಿದರು.

9. ವಿಶ್ವವಿದ್ಯಾನಿಲಯದಲ್ಲಿ ಮುಂಬಡ್ತಿ ಹೊಂದಲು ಅರ್ಹತೆ ಹೊಂದಿರುವ ಸಹಾಯಕರಿಗೆ ಅಧೀಕ್ಷಕರು ಮತ್ತು ಅಧೀಕ್ಷಕರಿಗೆ ಸಹಾಯಕ ಕುಲಸಚಿವರ ಹುದ್ದೆಗೆ ದಿನಾಂಕ 01.01.2024ರಂದು ಪದೋನ್ನತಿ ನೀಡಲಾಗಿದೆ. ಅಧ್ಯಾಪಕರ ಪದೋನ್ನತಿಯ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಅತ್ಯಂತ ಶೀಘ್ರದಲ್ಲಿ ಪದೋನ್ನತಿ ನೀಡಲು ಅಗತ್ಯ ಸಿದ್ಧತೆಮಾಡಿಕೊಳ್ಳಲಾಗಿದೆ.

10. ದಿನಾಂಕ 11.01.2024 ರಂದು ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ ವಿಭಾಗದ ವತಿಯಿಂದ "Unravelling Life Science through Technology" ವಿಷಯದ ಒಂದು ದಿವಸದ ಸಿಂಪೋಸಿಯಂ ಆಯೋಜಿಸಲಾಗಿತ್ತು.

11. ದಿನಾಂಕ 12.01.2023 ರಂದು ಬಹುಶಿಸ್ತೀಯ ಮಹಿಳಾ ಘಟಕ ಕಾಲೇಜಿನಲ್ಲಿ ರಾಷ್ಟ್ರೀಯ ಯುವ ದಿನಾಚರಣೆಯನ್ನು ಆಚರಿಸಲಾಯಿತು.

12. ವೃತ್ತಿನಿರತ ಉದ್ಯೋಗಿಗಳ ಅನುಕೂಲಕ್ಕಾಗಿ ಜಪಾನ್ ಬಾಷೆಯ ಡಿಪ್ಲೋಮ ಕೋರ್ಸನ್ನು ಪ್ರಾರಂಭಿಸಲಾಯಿತು.

13. ದಿನಾಂಕ 12.01.1023 ರಂದು ಗ್ರಂಥಾಲಯ ಸಲಹಾ ಸಮಿತಿ ಸಭೆಯನ್ನು ಜರುಗಿಸಲಾಯಿತು.

14. ದಿನಾಂಕ 22.01.2024ರಂದು ಯು.ಕೆ. ದೇಶದ ಔಬರ್ನ್ ವಿಶ್ವವಿದ್ಯಾನಿಲಯದ ಶೈಕ್ಷಣಿಕ ತಜ್ಞರ ತಂಡ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಅಧ್ಯಾಪಕರು ಮತ್ತು ಅಧಿಕಾರಿಗಳೊಂದಿಗೆ ವ್ಯಾಸಂಗ ಕ್ರಮಗಳು ಮತ್ತು ಪರಸ್ಪರ ಸಹಯೋಗ ಕುರಿತು ಚರ್ಚಿಸಿದರು.

15. ದಿನಾಂಕ 25.01.2024ರಂದು ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಯಿತು.

16. ದಿನಾಂಕ 26.01.2024ರಂದು ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಸಮಾರಂಭದಲ್ಲಿ, ವಿದ್ಯಾರ್ಥಿಗಳು, ಅಧಿಕಾರಿಗಳು, ಶಿಕ್ಷಕರು ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.

17. ದಿನಾಂಕ. 30.01.2024 ರಂದು "ಹುತಾತ್ಮರ ದಿನಾಚರಣೆ" ಆಚರಿಸಲಾಯಿರು. ಅದೇ ದಿವಸ ವಿಶ್ವವಿದ್ಯಾನಿಲಯದ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳ ವಿದ್ಯಾರ್ಥಿ ಕೋಶದಿಂದ "ವೃತ್ತಿ ನಿರ್ವಹಣೆ" ಕುರಿತು ಒಂದು ದಿವಸದ ಸಿಂಪೋಸಿಯಂ ಜರುಗಿಸಲಾಯಿತು.

18. ದಿನಾಂಕ 31.01.2024 ರಂದು ರಾಜ್ಯಶಾಸ್ತ್ರ, ಸಮಾಜಕಾರ್ಯ, ಇತಿಹಾಸ ಮತ್ತು ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗಗಳಿಂದ "ಮಾನವ ಹಕ್ಕುಗಳು ಮತ್ತು ಮಾಧ್ಯಮ" ಕುರಿತು ಉಪನ್ಯಾಸ ಏರ್ಪಡಿಸಲಾಗಿತ್ತು. ಶ್ರೀ ವೆಂಕಟೇಶ ನಾಯಕ, ನಿರ್ದೇಶಕರು, ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಶಿಯೇಟಿವ್ ಉಪನ್ಯಾಸ ನೀಡಿದರು.

19. 13.1.2024 ರಂದು ಸಸ್ಯಶಾಸ್ತ್ರ ವಿಭಾಗದ ವತಿಯಿಂದ 'Challenges and New Vistas in Botany" ಕುರಿತು ಸಿಂಪೋಸಿಯಂ ಆಯೋಜಿಸಲಾಗಿತ್ತು. ಖ್ಯಾತ ವಿಜ್ಞಾನಿಗಳು, ಅಧ್ಯಾಪಕರು ಇದರಲ್ಲಿ ಭಾಗವಹಿಸಿದರು.

20. ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಹಾಗೂ ಬರ್ಮಿಂಗ್‌ಹ್ಯಾಮ್ ನಗರ ವಿಶ್ವವಿದ್ಯಾಲಯಗಳ ಜಂಟಿ ಸಹಭಾಗಿತ್ವದಲ್ಲಿ ಪ್ರಾರಂಭಗೊಂಡಿರುವ "NET CARBON ZERO HUB" ಸಂಶೋಧನಾ ಯೋಜನೆಯ ಭಾಗವಾಗಿ 'Dual Transition of Net Zero Carbon and Digital Transformation' ವಿಷಯದ ಮೇಲೆ ಫೆಬ್ರವರಿ ತಿಂಗಳ 16 ಮತ್ತು 17 ರಂದು ಎರಡು ದಿವಸಗಳ ಅಂತರ್ ರಾಷ್ಟ್ರೀಯ ವಿಚಾರ ಸಮ್ಮೇಳನವನ್ನು ವಿಶ್ವವಿದ್ಯಾನಿಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಜರುಗಿಸಲಾಯಿತು. ರಾಜ್ಯದ ಉನ್ನತ ಶಿಕ್ಷಣ ಸಚಿವರಾದ ಸನ್ಮಾನ್ಯ ಡಾ. ಎಂ.ಸಿ. ಸುಧಾಕರ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಸಮ್ಮೇಳನವನ್ನು ಉದ್ಘಾಟಿಸಿದರು. ಹಿರೋ ಸೈಕಲ್ಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಪ್ರೇಮಕುಮಾರ (ಆನ್‌ಲೈನ್‌ನಲ್ಲಿ), ಕರ್ನಾಟಕ ವಾಣಿಜ್ಯ ಮಂಡಳಿಯ ಅಧ್ಯಕ್ಷರಾದ ಶ್ರೀ ರಮೇಶಚಂದ್ರ ಲಾಹೋಟಿ, ಬರ್ಮಿಂಗ್ ಹ್ಯಾಮ್ ಸಿಟಿ ವಿಶ್ವವಿದ್ಯಾನಿಲಯದ ಡಾ. ಅಲೆಕ್ಸ್ ಡಿ ರಾಯ್ಬರ್ ಹಾಗೂ ಡಾ. ಶಿಶಾಂಕ್, ವೋಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾನಿಲಯದ ಡಾ. ಸುರೇಶ್ ರೇಣುಕಪ್ಪ ಹಾಗೂ ಡಾ. ಸುಭಾಷಿಣಿ ಸುರೇಶ್, ಅವರಲ್ಲದೆ ಶ್ರೀ ಉಮೇಶ್ ರಾವ್, ನಿವಿಯಾ ಲಾಜಿಸ್ಟಿಕ್, ಡಾ ಸುರೇಶ್ ಬಾಬು, ವಾಸುಕಿ ಗ್ರೂಪ್ ಆಫ್ ಕಂಪನೀಸ್, ಶ್ರೀ ಪ್ರವೀಣ್ ಹುನ್‌ಗುಂದ್, ಐಎಎಫ್, ರೂರಲ್ ಡೆವಲಪ್‌ಮೆಂಟ್ ಮತ್ತು ಪಂಚಾಯತ್ ರಾಜ್

ಇಲಾಖೆ, ಶ್ರೀ ಸುಂದರೇಸನ್ ಜಗದೀಸನ್, ಅಧ್ಯಕ್ಷರು, ಫಿಲಿಫ್ಸ್, ಡಾ. ರಿಡೋನೆ ಸಾರಕ್, ಯುನಿರ್ವಸಿಟಿ ಆಫ್ ಲಿಂಕನ್, ಯು.ಕೆ, ಶ್ರೀ. ಸಂಗಮೇಶ್ ವಡಗಾವೆ, ಸ್ಕೈರಾಕೆಟ್ ಇನೋವೇಷನ್ಸ್, ಯು.ಕೆ, ಶ್ರೀ. ಲೂಕ್ ಸಿಬ್ರೈಟ್, ಕೋಲಾಸ್ ರೇಲ್ ಲಿಮಿಟೆಡ್, ಯು.ಕೆ, ಶ್ರೀ. ನಾಗರಾಜು ಯಾಬತ್ತಿ, TERI, ಬೆಂಗಳೂರು, ಶ್ರೀ ಚಂದ್ರಶೇಖರ್ ಸುಬ್ಬರಾವ್, ಯುನಿರ್ವಸಿಟಿ ಆಫ್ ವೋಲ್ವರ್‌ಹ್ಯಾಂಪ್ಟನ್, ಯು.ಕೆ, ಪ್ರೊ. ಮೈಕಲ್ ಫುಲೆನ್, ಯುನಿರ್ವಸಿಟಿ ಆಫ್ ವೋಲ್ವರ್‌ಹ್ಯಾಂಪ್ಟನ್, ಯು.ಕೆ, ಶ್ರೀ ನರಸಿಂಹ ಮೂರ್ತಿ, ಆಟೋಲಿವ್-ಇಂಡಿಯಾ, ಲತಾ. ಸಿ, ಕಾಂಟಿನೆಂಟಲ್ ಅಟೋಮೋಟಿವ್ಸ್, ಶ್ರೀ ಶ್ರೀನಿವಾಸಲು, ಐಎಫ್‌ಎಸ್, ಕಮಿಷನರ್-ಆಯುಷ್, ಕೆ.ಜಿ. ಚಂದ್ರಶೇಖರ್, ಕಾರ್ಯನಿರ್ವಾಹಕ ನಿರ್ದೇಶಕರು ಕೆ.ಎಸ್.ಹೆಚ್.ಇ.ಸಿ., ಮುಂತಾದವರು ವೈಯಕ್ತಿಕವಾಗಿ ಮತ್ತು ಕೆಲವರು ಆನ್‌ಲೈನ್ ಮುಖಾಂತರ ಭಾಗವಹಿಸಿದರು. ದಿನಾಂಕ 17.2.2024 ರಂದು ಜರುಗಿದ ಸಮಾರೋಪ ಸಮಾರಂಭದಲ್ಲಿ, ಖ್ಯಾತ ಟೋಯಟ ಕಂಪನಿಯ ಉಪಾಧ್ಯಕ್ಷರಾದ ಶ್ರೀ ಸಂತೋಷ ರಾವ್ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಎರಡೂ ವಿಶ್ವವಿದ್ಯಾನಿಲಯಗಳ, ದೇಶ-ವಿದೇಶಗಳ ವಿಶ್ವವಿದ್ಯಾನಿಲಯಗಳ ಅಧ್ಯಾಪಕರು, ವಿದ್ವಾಂಸರು, ಕೈಗಾರಿಕೆಗಳ ತಜ್ಞರು, ಸಂಶೋಧಕರು, ನೀತಿ ನಿರೂಪಕರು, ಎನ್.ಜಿ.ಓ.ಗಳ ಪ್ರತಿನಿಧಿಗಳು ಈ ಅಂತರ್ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿದರು. ಒಟ್ಟು 7 ಟೆಕ್ನಿಕಲ್ ಸೆಷನ್ ಗಳಲ್ಲಿ ಒಟ್ಟು 125 ಸಂಶೋಧನಾ ಲೇಖನಗಳನ್ನು ಮಂಡಿಸಲಾಯಿತು.

21. ದಿನಾಂಕ 21.02.2024ರಂದು ಅಮೆರಿಕ ದೇಶದ ಬ್ರಿಡ್ಜ ವಾಟರ್ ಸ್ಟೇಟ್ ಯುನಿವರ್ಸಿಟಿಯ ಶಿಕ್ಷಣ ತಜ್ಞರ ತಂಡ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿತು. ನಮ್ಮ ವಿಶ್ವವಿದ್ಯಾನಿಲಯದ ವ್ಯಾಸಂಗ ಕ್ರಮವನ್ನು ಅರಿತುಕೊಳ್ಳುವ ಹಾಗೂ ಎರಡೂ ವಿಶ್ವವಿದ್ಯಾನಿಲಯಗಳು ಶೈಕ್ಷಣಿಕ ಮತ್ತು ಸಂಶೋಧನಾ ವಲಯದಲ್ಲಿ ಪರಸ್ಪರ ಹೊಂದಬಹುದಾದ ಸಹಯೋಗಗಳ ಕುರಿತು ಚರ್ಚೆ ನಡೆಸಿತು.

22. ದಿನಾಂಕ 22.02.2024ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ರಾಜ್ಯದ ಎಲ್ಲ ವಿಶ್ವವಿದ್ಯಾನಿಲಯಗಳ ಪಿ.ಹೆಚ್.ಡಿ. ಪ್ರವೇಶಗಳಿಗೆ ಏಕ ರೂಪದ ಕೇಂದ್ರೀಕೃತ ಪ್ರವೇಶ ಪರೀಕ್ಷೆಗಳನ್ನು ನಡೆಸಲು ಹಾಗೂ ಸಂಶೋಧನಾ ವಿದ್ಯಾರ್ಥಿಗಳ ಹಂಚಿಕೆ ಕುರಿತು ನಿಯಮಾವಳಿಗಳನ್ನು ಸಿದ್ಧಪಡಿಸಲು ರಚಿಸಿದ ಸಮಿತಿಯ ಸಭೆಯಲ್ಲಿ ಪಾಲ್ಗೊಂಡು ವಿಚಾರಗಳನ್ನು ಪ್ರಸ್ತಾಪಿಸಲಾಯಿತು. ಅದೇ ದಿವಸ ಕೇಂದ್ರೀಯ ಖರೀದಿ ಸಭೆಯನ್ನು ಜರುಗಿಸಿ ಅಗತ್ಯವಾಗಿ ಖರೀದಿಸಬೇಕಾದ ಕಂಪ್ಯೂಟರ್ ಮತ್ತು ಉಪಕರಣಗಳು ಕುರಿತು ಶಿಫಾರಸ್ಸುಗಳನ್ನು ಮಾಡಲಾಯಿತು.

23. ದಿನಾಂಕ 23 ಮತ್ತು 24 ಫೆಬ್ರವರಿ 2024 ರಂದು ವಿಶ್ವವಿದ್ಯಾನಿಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ, ಜಾಗತಿಕ ಭಾಷಾ ಕೇಂದ್ರದ ವತಿಯಿಂದ ಅಂತರಾಷ್ಟ್ರೀಯ ಭಾಷಾ ಮೇಳ-2024 ಆಯೋಜಿಸಲಾಗಿತ್ತು. ಅಂತರಾಷ್ಟ್ರೀಯ ಖ್ಯಾತಿಯ ಕಲಾ ತಜ್ಞೆ ಡಾ. ಚೂಡಾಮಣಿ ನಂದಗೋಪಾಲ್, ಮುಖ್ಯ ಅತಿಥಿಗಳಾಗಿ ಆಗಮಿಸಿ ಕಲೆ ಮತ್ತು ಪ್ರಕೃತಿ ಕುರಿತು ಜಾಗತಿಕ ಮಟ್ಟದಲ್ಲಿ ಬೆಳೆದುಬಂದ ವಿವರಗಳನ್ನು ವಿವರಿಸಿದರು. ಫ್ರಾನ್ಸ್ ಮತ್ತು ಇಟಲಿ ದೇಶಗಳ ಗೌರವಾನ್ವಿತ ಕೌನ್ಸಲ್ ಜನರಲ್ ಆದ ಶ್ರೀ ಥೇರಿ ಬರ್ಥಲೋಟ್ ಮತ್ತು ಶ್ರೀ ಅಲ್ಫಾನ್ಸೊ ಟಾಗ್ಲಿಯಾಫೇರಿ, ಜಾಗತಿಕ ಭಾಷೆಗಳ ವಿಭಾಗದ ಸಂಸ್ಥಾಪಕ ಮುಖ್ಯಸ್ಥರಾಗಿದ್ದ ಡಾ. ಸುಮನ ವೆಂಕಟೇಶ್ ಸಮಾರಂಭದಲ್ಲಿ ಅತಿಥಿಗಳಾಗಿ ಭಾಗವಹಿಸಿದರು. ಎರಡು ದಿವಸಗಳ ಸಮಾರಂಭದಲ್ಲಿ ಖ್ಯಾತ ಪರಿಸರವಾದಿ ಚಿತ್ರ ನಿಮಾಪಕ, ನಿರ್ದೇಶಕ ಹಾಗೂ ನಟ ಶ್ರೀ ಸುರೇಶ ಹೆಬ್ಳಿಕರ್, ಹಿನ್ನೆಲೆಗಾಯಕಿ, ಡಾ. ಪ್ರಿಯದರ್ಶಿನಿ, ಕಾನೂನು ಪ್ರಾಧ್ಯಾಪಕ ಡಾ. ಟಿ.ಆರ್. ಸುಬ್ರಮಣ್ಯ, ನೃತ್ಯಶಾಸ್ತ್ರದ ಸಶೋಧಕಿ ಡಾ ವಿದ್ಯಾ ರಾವ್, ಚಿತ್ರಕಲಾ ಪರಿಷತ್ತಿನ ಕಲಾ ಪ್ರಾಧ್ಯಾಪಕ ಡಾ. ರಾಘವೇಂದ್ರ ರಾವ್ ಕುಲ್ಕರ್ಣಿ ಮತ್ತು ರಂಗ ಕಲಾವಿದ ಡಾ. ಬಾಬು ಹಿರಣ್ಣಯ್ಯ ಭಾಗವಹಿಸಿದರು. ಕುಲಪತಿಗಳಾದ ಪ್ರೊ. ಲಿಂಗರಾರಾಜ ಗಾಂಧಿ ಅಧ್ಯಕ್ಷತೆ ವಹಿಸಿದ್ದರು. ಕುಲಸಚಿವರಾದ ಶ್ರೀ ಜವರೇಗೌಡ ಉಪಸ್ಥಿತರಿದ್ದರು. ಜಾಗತಿಕ ಭಾಷಾ ಕೇಂದ್ರದ ಅಧ್ಯಕ್ಷರಾದ ಡಾ. ಜ್ಯೋತಿ ವೆಂಕಟೇಶ್ ರವರು ಕಾರ್ಯಕ್ರಮವನ್ನು ನಿರ್ವಹಿಸಿದರು.

24. ದಿನಾಂಕ 26.2.2024ರಂದು ಹಣಕಾಸು ಸಮಿತಿ ಸಭೆ ಜರುಗಿಸಿ, ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ಆಯವ್ಯಯ ಅಂದಾಜು ಪತ್ರವನ್ನು ಅನುಮೋದನೆಗೆ ಶಿಫಾರಸ್ಸು ಮಾಡಿರುತ್ತದೆ. ಅದರಂತೆ,

2020–21 ಮತ್ತು 2021–22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳನ್ನು ಪರಿಶೀಲಿಸಿ ಅನುಮೋದನೆ ನೀಡಿದ್ದು ಅವುಗಳನ್ನು ಇಂದಿನ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗಿದೆ.

25. 2023–24ನೇ ಸಾಲಿನ ಖೇಲೋ ಇಂಡಿಯಾ ವಿಶ್ವವಿದ್ಯಾಲಯಗಳ ಪಂದ್ಯಾಟದಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಹಾಕಿ ಪುರಷರ ತಂಡ ಸತತವಾಗಿ ಎರಡು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದು, ಈ ಸಲ ದ್ವಿತೀಯ ಸ್ಥಾನ ಗಳಿಸಿ ಬೆಳ್ಳಿ ಪದಕ ಪಡೆದಿದ್ದಾರೆ. ಅಲ್ಲದೆ ಅಖಿಲ ಭಾರತ ವಿಶ್ವವಿದ್ಯಾಲಯಗಳ ಪಾಂದ್ಯಾಟದಲ್ಲಿ 3ನೇ ಸ್ಥಾನ ಪಡೆದು ರಜಕ ಪದಕ ಪಡೆದಿದೆ. ಇದು ಎಲ್ಲರೂ ಹೆಮ್ಮೆ ಹಾಗೂ ಸಂತೋಷ ಪಡುವ ಸಾಧನೆ.

****

ಮೇಲಿನ ವರದಿಯ ನಂತರ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲು ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರಿಗೆ ತಿಳಿಸಿದರು.

**ವಿಷಯ ಸಂಖ್ಯೆ: 01**

ವಿಷಯ: ದಿನಾಂಕ 21.11.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ಧೃಡಿಕೃತ ನಡವಳಿಗಳ ಮೇಲೆ ಕೈಗೊಂಡ ಅನುಪಾಲನಾ ವರದಿ.

*ವಿವರಣೆ:*

ಕೈಗೊಂಡ ಕ್ರಮಗಳ ವರದಿಯ ಕ್ರ.ಸಂ. 6 ಕುರಿತಂತೆ, ಕುಲಸಚಿವರು (ಮೌ) ರವರು ವಿವರಗಳನ್ನು ನೀಡಿ NEP ಜಾರಿಯಲ್ಲಿ ಬರುವುದಕ್ಕೂ ಪೂರ್ವದಲ್ಲಿ ಪ್ರವೇಶ ಪಡೆದ I ರಿಂದ VI ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸಲು ಯು.ಯು.ಸಿ.ಎಂ.ಎಸ್‌ನಲ್ಲಿ ಅವಕಾಶವಿಲ್ಲದಿರುವುದರಿಂದ ಇದಕ್ಕಿಂತ ಪೂರ್ವದಲ್ಲಿ ಪರೀಕ್ಷಾ ಕೆಲಸಗಳ ನಿರ್ವಹಣೆಗೆ ಸಂಬಂಧಿಸಿದಂತೆ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ನೀಡುತ್ತಿದ್ದ ಸಂಸ್ಥೆಗಳಿಂದ ಸೇವೆ ಪಡೆಯಲು ಸರ್ಕಾರದ ನಿರ್ಬಂಧದಿಂದ ವಿನಾಯಿತಿ ನೀಡಿ ಹಿಂದಿನ ಸಂಸ್ಥೆಗಳಿಂದ ಹೊರಗುತ್ತಿಗೆ ಸೇವೆ ಪಡೆದು ಪರೀಕ್ಷಾ ಕೆಲಸಗಳನ್ನು ನಿರ್ವಹಿಸಲು ಸರ್ಕಾರದ ಅನುಮತಿ ಕೋರಿ ಪತ್ರ ಬರೆಯಲಾಗಿದೆ. ಸರ್ಕಾರದಿಂದ ಸಕಾರಾತ್ಮಕ ಪ್ರತಿಕ್ರಿಯೆ ದೊರಕಿದ್ದು, ಕೆಲವು ದಿವಸಗಳಲ್ಲಿ ಅನುಮತಿ ನೀಡುವ ಸಾಧ್ಯತೆ ಇದೆ. ಅನುಮತಿ ದೊರೆತ ತಕ್ಷಣ ಪರೀಕ್ಷಾ ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆ ಹೊರಡಿಸಲಾಗುವುದು ಎಂದು ಹೇಳಿದರು.

ಉಳಿದಂತೆ ಕೈಕೊಂಡ ಕ್ರಮಗಳ ವರದಿಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆ ಅನುಮೋದನೆ ನೀಡಲು ತೀರ್ಮಾನಿಸಿತು.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ದಿನಾಂಕ 21.11.2023 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ಧೃಡೀಕೃತ ನಡವಳಿಗಳ ಮೇಲೆ ಕೈಗೊಂಡ ಅನುಪಾಲನಾ ವರದಿಯನ್ನು ಅನುಮೋದಿಸಲಾಯಿತು.**

ವಿಷಯ ಸಂಖ್ಯೆ: 02

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಅನುಮೋದಿಸುವ ಬಗ್ಗೆ.

*ಪರಾಮರ್ಶಕ ಟಿಪ್ಪಣಿ*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2024–25ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜು ಪತ್ರವನ್ನು ಸಿದ್ಧಪಡಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನುಚ್ಛೇದ 48 ಪ್ರಕಾರ ಕರಡು ಆಯವ್ಯಯ ಅಂದಾಜು ಪತ್ರವನ್ನು ದಿನಾಂಕ 26.02.2024 ರಂದು ಜರುಗಲಿರುವ ಹಣಕಾಸು ಸಮಿತಿ ಸಭೆಯ ಪರಿಶೀಲನೆಗೆ ಮಂಡಿಸಲಾಗಿದೆ.

**2024–25ನೇ ಸಾಲಿನ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜು ಪತ್ರದ ಸಾರಾಂಶ**

| | |
|---|---|
| 1. ಅಂದಾಜು ಒಟ್ಟು ಸ್ವೀಕೃತಿಗಳು (Receipts) | ರೂ. 19,841.13 ಲಕ್ಷಗಳು |
| 2. ಅಂದಾಜು ಒಟ್ಟು ಖರ್ಚು–ವೆಚ್ಚಗಳು (Expenditure) | ರೂ. 19,020.98 ಲಕ್ಷಗಳು |
| 3. ಕಾಯ್ದಿರಿಸಿರುವ ನಿಧಿ –(Reserve fund) | ರೂ. 500.00 ಲಕ್ಷಗಳು |
| 4. ಹೆಚ್ಚುವರಿ ಆಯವ್ಯಯ (Surplus) | ರೂ. 320.15 ಲಕ್ಷಗಳು |

ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಅನುಚ್ಛೇದ 48 ಪ್ರಕಾರ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

*ವಿವರಣೆ:*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಆಯವ್ಯಯ ಅಂದಾಜುಗಳ ಕುರಿತಂತೆ, ದಿನಾಂಕ 27.02.2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ದಿನಾಂಕ 26.02.2024 ರಂದು ಜರುಗಿದ ಹಣಕಾಸು ಸಮಿತಿಯ ಕೆಳಕಂಡ ಶಿಫಾರಸ್ಸು ಮತ್ತು ಟಿಪ್ಪಣಿಗಳನ್ನು ಮಂಡಿಸಲಾಯಿತು.

**ದಿನಾಂಕ 26.02.2024 ರಂದು ಜರುಗಿದ ಹಣಕಾಸು ಸಮಿತಿಯ ಶಿಫಾರಸ್ಸು:**

ಸುಧೀರ್ಘ ಚರ್ಚೆಯ ನಂತರ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಒಟ್ಟು ಸ್ವೀಕೃತಿ ರೂ.198.41 ಕೋಟಿ ಹಾಗೂ ಒಟ್ಟು ವೆಚ್ಚ ರೂ.190.20 ಕೋಟಿಗಳ ಆಯವ್ಯಯ ಅಂದಾಜು ಪತ್ರಿಕೆಗೆ ಹಣಕಾಸು ಸಮಿತಿ ಸಭೆ ಅನುಮೋದಿಸಿ ಪ್ರಾಧಿಕಾರಗಳಿಗೆ ಶಿಫಾರಸ್ಸು ಮಾಡಲು ಹಣಕಾಸು ಸಮಿತಿ ಒಪ್ಪಿಗೆಯನ್ನು ನೀಡಿತು.

ಮಾನ್ಯ ಕುಲಪತಿಗಳು ಕೆಳಗಿನ ವಿವರಣೆಗಳನ್ನು ಹಾಗೂ ಹಣಕಾಸು ಸಮಿತಿಯ ಟಿಪ್ಪಣಿಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಗೆ ನೀಡಿದರು.

I. ಈ ವರ್ಷದ ಸ್ವೀಕೃತಿಗಳು ರೂ. 177.66 ಕೋಟಿಗಳಾಗಿದ್ದು, ಅಂದಾಜಿಗಿಂತ 1.35% ಹೆಚ್ಚಳವಾಗಿರುವುದಾಗಿ ತಿಳಿಸಿ ವೆಚ್ಚಗಳು ಅಂದಾಜಿಗಿಂತ ಶೇ. 40% ಅದರೆ ರೂ. 73.98 ಕೋಟಿಗಳಾಗಿದ್ದು, ಹಲವಾರು ಟೆಂಡರ್ ಪ್ರಕ್ರಿಯೆಗಳು ಚಾಲ್ತಿಯಲ್ಲಿ ಇರುವುದರಿಂದ ವೆಚ್ಚಗಳು ಅಂದಾಜಿಗಿಂತ ಕಡಿಮೆಯಾಗಿರುತ್ತವೆ ಎಂದು ತಿಳಿಸಿದರು.

II. 2024–25ನೇ ಸಾಲಿನಿಂದ ಕಾಯ್ದಿರಿಸುವ ನಿಧಿ Reserve Fund ರೂಪಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿ ನಿವೃತ್ತಿ ವೇತನ ಪಾವತಿಗಾಗಿ ಪ್ರತ್ಯೇಕವಾಗಿ ರೂ. 2.5 ಕೋಟಿಗಳು ಕಾಯ್ದಿರಿಸಲಾಗಿದೆ ಎಂದು ತಿಳಿಸಿದರು.

III. 2024–25ನೇ ಸಾಲಿನ ಆಯವ್ಯಯದಲ್ಲಿ ವಿಶ್ವವಿದ್ಯಾನಿಲಯ ಕೈಗೊಳ್ಳಬೇಕಾದ ಅಭಿವೃದ್ಧಿ ಚಟುವಟಿಕೆಗಳನ್ನು ಗಮನದಲ್ಲಿಟ್ಟುಕೊಂಡು ಅಂದಾಜು ಪತ್ರ ಸಿದ್ಧಪಡಿಸಲಾಗಿದೆ. ಆಸ್ತಿತ್ವದಲ್ಲಿರುವ ಮತ್ತು ಹೊಸದಾಗಿ ಪ್ರಾರಂಭಿಸಿರುವ ವಿಭಾಗಗಳಿಗೆ ಭೌತಿಕ ಮೂಲಭೂತ ಸೌಲಭ್ಯ, ಒದಗಿಸುವುದು, ಸ್ನಾತಕ ಮೂರನೇ ವರ್ಷದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಕೋಣೆಗಳನ್ನು ಒಗಿಸುವದು, ಪ್ರಯೋಗಾಲಯ ಉಪಕರಣಗಳು, ಗ್ರಂಥಾಲಯದ ಡಿಜಟಿಲೀಕರಣ, ಕ್ಯಾಂಪಸ್ ಉದ್ಯಾವನ ನಿರ್ವಹಣೆ, ರಕ್ಷಣೆ, ಹೊಸ ವಿಭಾಗಗಳಿಗೆ ಅಗತ್ಯವಾದ ಹೆಚ್ಚುವರಿ ಸಿಬ್ಬಂದಿಗಳು, ಕ್ರೀಡಾಂಗಣ ಮತ್ತು ಈಜುಕೊಳಗಳಲ್ಲಿ ನಿರ್ಮಿಸಲಾದ ಆಧುನಿಕ ಸೌಲಭ್ಯಗಳ ನಿರ್ವಹಣೆಗೆ ಮತ್ತು ತರಬೇತಿಗೆ ಸಿಬ್ಬಂದಿಗಳು, ದೈಹಿಕ ಶಿಕ್ಷಣ ಯೋಗ ಮತ್ತು ಕ್ರೀಡಾ ವಿಜ್ಞಾನ ಕುರಿತಂತೆ ಹೊಸ ವಿಭಾಗ ಪ್ರಾರಂಭಿಸಲು ಯೋಜಿಸಿದ್ದು ಅದಕ್ಕಾಗಿ ಸೌಲಭ್ಯಗಳು ಕಾನೂನು ಕಾಲೇಜು ಪುನಃಶ್ಚೇತನ, ಸ್ನಾತಕೋತ್ತರ ಶಿಕ್ಷಣ ವಿಭಾಗದ ಪ್ರಾರಂಭ, ಎಂ.ಬಿ.ಎ ವ್ಯಾಸಂಗಕ್ಕೆ ಒಂದು ಹೆಚ್ಚುವರಿ ವಿಭಾಗ ಪ್ರಾರಂಭದ ಜೊತೆಗೆ ಈಗಾಗಲೇ ಸರ್ಕಾರ ಅನುಮತಿಸಿದ ಕೋರ್ಸುಗಳನ್ನು ಸಹ ಪ್ರಾರಂಭಿಸುವ ಅಗತ್ಯವನ್ನು ಗಮನದೆಲ್ಲಿಟುಕೊಂಡು ಆಯವ್ಯಯ ಅಂದಾಜು ಸಿದ್ಧಪಡಿಸಲಾಗಿದೆ.

IV. ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿರುವುದರಿಂದ ಆದಾಯದಲ್ಲಿಯೂ ಸಹ ಏರಿಕೆಯಾಗಿರುವುದನ್ನು ಗಮನಿಸಬಹುದಾಗಿದೆ. ಇವುಗಳಿಗೆ ಪೂರಕವಾದ ಸೌಲಭ್ಯಗಳನ್ನು ಒದಗಿಸಬೇಕಾಗಿದೆ.

V. ಕ್ಯಾಂಪಸ್ ನವೀಕರಣ ಯೋಜನೆಯಲ್ಲಿ ಸೇರಿಕೊಳ್ಳದ ಪರೀಕ್ಷಾ ವಿಭಾಗದ ಕಟ್ಟಡ, ಯು.ಜಿ.ಸಿ, ಕಛೇರಿ ಇದ್ದ ಕಟ್ಟಡ, ಸಂವಹನ ವಿಭಾಗ ಮತ್ತು ಹಿಂದಿನ ಕಾನೂನು ಕಾಲೇಜು ಕಟ್ಟಡ ಸಹ ತುಂಬಾ ಹಳೆಯದಾಗಿದ್ದು, ಅವುಗಳನ್ನು ನವೀಕರಣ ಮಾಡುವ ಯೋಜನೆಗೆ ಚಾಲನೆ ಕೊಟ್ಟಿದ್ದು, ಬರುವ ಹಣಕಾಸು ವರ್ಷದಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

VI. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಯವ್ಯದಲ್ಲಿ ಸರ್ಕಾರದ ವೇತನಾನುದಾನಗಳನ್ನು ರೂ. 981.93 ಲಕ್ಷಗಳೆಂದು ಅಂದಾಜಿಸಲಾಗಿದ್ದು, ಈಗಾಗಲೇ ರಾಜ್ಯದ ಆಯವ್ಯಯ ಮಂಡನೆ ಆಗಿದ್ದು ಇದರಲ್ಲಿ ವೇತನ ಪಾವತಿಗಾಗಿ ಮಾತ್ರ ರೂ. 628.77 ಲಕ್ಷಗಳು ಹಂಚಿಕೆ ಮಾಡಲಾಗಿರುತ್ತದೆ. ಅದರಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆಯವ್ಯಯದ ಅಂಕಿ ಅಂಶಗಳನ್ನು ಸರಿಪಡಿಸಬೇಕಾಗಿದೆ ಎಂದು ಹಣಕಾಸು ಸಮಿತಿಯಲ್ಲಿ ಸೂಚಿಸಿರುತ್ತದೆ.

VII. Capital ಬಂಡವಾಳ ವೆಚ್ಚಗಳಲ್ಲಿ Campus Re-development Phase - 1 & Phase -2 ಗಳಿಗೆ ಸೂಕ್ತ ಮಾರ್ಗ ಸೂಚಿಗಳನ್ನು ನಿರ್ದೇಶಿಸಿಕೊಳ್ಳಲು ಹಣಕಾಸು ಸಮಿತಿ ಸೂಚಿಸಿರುತ್ತದೆ.

VIII. ಪರೀಕ್ಷಾ ಪ್ರಕ್ರಿಯೆ ನಿರ್ವಹಣೆ ಹಾಗೂ E-Governance ವೆಚ್ಚಗಳಿಗೆ ಸಂಬಂಧಪಟ್ಟಂತೆ 2024-25ನೇ ಸಾಲಿಗೆ ರೂ.6.00 ಕೋಟಿಗಳನ್ನು ನಿಗದಿಪಡಿಸಿದ್ದು, ಇದಕ್ಕೆ ಪರೀಕ್ಷಾ ಸುಧಾರಣೆಗಳಿಗೆ ಮೀಸಲಿರಿಸಿದ ರೂ.2.00 ಕೋಟಿ ಮೊತ್ತವನ್ನು ರೂ.1.00 ಕೋಟಿಗೆ ಸೀಮಿತಗೊಳಿಸಿ ಉಳಿದ ಒಂದು ಕೋಟಿಯನ್ನು ಪರೀಕ್ಷಾ ಪ್ರಕ್ರಿಯೆ ನಿರ್ವಹಣೆ ಹಾಗೂ E-Governance ಶೀರ್ಷಿಕೆಯಲ್ಲಿ ಹೆಚ್ಚಿಸಿಕೊಂಡು ಆಯವ್ಯಯವನ್ನು ಪರಿಷ್ಕರಿಸಲು ಹಣಕಾಸು ಸಮಿತಿ ಸೂಚಿಸಿರುತ್ತದೆ.

IX. 2024-25ನೇ ಸಾಲಿನಲ್ಲಿ ಕಾಯ್ದಿರಿಸಿರುವ ನಿಧಿಯ ಸ್ಥಾಪನೆಯನ್ನು ಹಾಗೂ ಪಿಂಚಣಿ ಸೌಲಭ್ಯಗಳಿಗಾಗಿ ರೂ.2.50 ಕೋಟಿಗಳನ್ನು ಅಂದಾಜುಗೊಳಿಸಿರುವುದು ಉತ್ತಮವಾಗಿದೆ ಎಂದು ಹಣಕಾಸು ಸಮಿತಿಯ ಅಭಿಪ್ರಾಯವಾಗಿದೆ.

X. ಮೇಲಿನ ಎಲ್ಲಾ ಚಟುವಟಿಕೆಗಳನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಭರಿಸಲಾಗುತ್ತಿದೆ. ಸರ್ಕಾರದಿಂದ ಖಾಯಂ ಸಿಬ್ಬಂದಿಗಳ ವೇತನ ಹೊರತುಪಡಿಸಿ ಬೇರೆ ಯವುದೇ ಅನುದಾನ ಬರುವ ಸಾಧ್ಯತೆ ಇಲ್ಲವೆಂದು ಸಭೆಗೆ ತಿಳಿಸಿದರು.

XI. ಸದಸ್ಯರಾದ ಶ್ರೀ ಕೇಶವ್ ಪ್ರಸಾದ್ ರವರು ಸರ್ಕಾರಕ್ಕೆ ಅನುದಾನ ಕೇಳಿ ಸಲ್ಲಿಸಿದ ಪ್ರಸ್ತಾವನೆಗಳ ಒಟ್ಟು ಮೊತ್ತ, ಸರ್ಕಾರದಿಂದ ಮಂಜೂರಾದ ಅನುದಾನ ಮತ್ತು ಇನ್ನೂ ಬರಬೇಕಾದ ಅನುದಾನಗಳ ಮಾಹಿತಿ ನೀಡಲು ಕೋರಿದರು. ಅದರಂತೆ ಆಯವ್ಯಯದಲ್ಲಿ ಇರುವ ಮಾಹಿತಿ ನೀಡಿ ವಿವಿಧ ಸಂದರ್ಭಗಳಲ್ಲಿ ಸಲ್ಲಿಸಿರುವ ಪ್ರಸ್ತಾವನೆಗಳ ಕ್ರೋಢೀಕೃತ ಮಾಹಿತಿ ನಂತರ ನೀಡಲಾಗುವುದು ಎಂದು ತಿಳಿಸಲಾಯಿತು.

**ವಿದ್ಯಾವಿಷಯಕ ಪರಿಷತ್ ತೀರ್ಮಾನ:**

**ಹಣಕಾಸು ಸಮಿತಿ ಶಿಫಾರಸ್ಸು ಮಾಡಿರುವ 2024-25ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆ ಸರ್ವಾನುಮತದ ಅನುಮೋದನೆ ನೀಡಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 03**

ವಿಷಯ: 2020-21 ಮತ್ತು 2021-22ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಮೇಲೆ ಸಿದ್ಧಪಡಿಸಿದ ಅನುಪಾಲನಾ ವರದಿಗಳ ಪರಿಶೀಲನೆ ಹಾಗೂ ಅನುಮೋದನೆ ಕುರಿತು.

***ಪರಾಮರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯ 2017 ರಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000ಕ್ಕೆ ತಿದ್ದುಪಡಿ ತರುವ ಮೂಲಕ ಅಸ್ತಿತ್ವಕ್ಕೆ ಬಂದಿದ್ದು, 2018-19ನೇ ಸಾಲಿನಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000 ರ ಪ್ರಕರಣ 47(3) ರ ಪ್ರಕಾರ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರಗಳ ಇಲಾಖೆಯ ಪ್ರಧಾನ ನಿರ್ದೇಶಕರು ನಿರ್ವಹಿಸಿ ವರದಿಯನ್ನು ಬಿಡುಗಡೆ ಮಾಡಬೇಕಾಗುತ್ತದೆ. ಅದರಂತೆ, 2020-21 ಮತ್ತು 2021-22ನೇ ಸಾಲಿನ ಲೆಕ್ಕಪತ್ರಗಳ

ಪರಿಶೀಲನೆಯನ್ನು ಕೈಗೊಂಡು ಅಂತಿಮ ವರದಿಯನ್ನು ದಿನಾಂಕ 04.07.2023 ಮತ್ತು 07.10.2023 ರಂದು ಬಿಡುಗಡೆ ಮಾಡಿದ್ದಾರೆ. ಸದರಿ ವರದಿಯ ಕಂಡಿಕೆಗಳಿಗೆ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಂದ ಮಾಹಿತಿ ಹಾಗೂ ಅವುಗಳಿಗೆ ಪೂರಕವಾದ ಅನುಬಂಧಗಳನ್ನು ಪಡೆದು ಕ್ರೋಢೀಕರಿಸಿ ಅನುಪಾಲನಾ ವರದಿಯನ್ನು ಸಿದ್ಧಪಡಿಸಲಾಗಿದೆ.

ರಾಜ್ಯ ಲೆಕ್ಕಪರಿಶೋಧನೆ ಹಾಗೂ ಲೆಕ್ಕಪತ್ರಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಪತ್ರ ಸಂ. ರಾಲೆಪ/ಲೆಪವಿ/03/24/ಇತರೆ/2021-22/85 ದಿನಾಂಕ 10.04.2023ರ ಮತ್ತು ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂ.ಶಿಇ/83/ಈಎಫ್‌ಬಿ/2023 ದಿನಾಂಕ 29-05-2023 ರ ಪ್ರಕಾರ, ಬಾಕಿ ಇರುವ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆಗಳಿಗೆ ತೀರುವಳಿ ಕುರಿತು ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಆದೇಶಗಳಾನುಸಾರ ಕ್ರಮವಹಿಸಲು ವಿಶ್ವವಿದ್ಯಾಲಯದ ಕುಲಪತಿಗಳ ಅಧ್ಯಕ್ಷತೆಯಲ್ಲಿ ಅಡಹಾಕ್ ಸಮಿತಿಗಳನ್ನು ರಚಿಸಿ, ಸಮಿತಿಯ ಶಿಫಾರಸ್ಸುಗಳನ್ನು, ಹಣಕಾಸು ಸಮಿತಿ ಮತ್ತು ಸಿಂಡಿಕೇಟ್‌ಗಳ ಸಭೆಗಳ ಅನುಮೋದನೆ ಪಡೆದು ಕಂಡಿಕೆಗಳ ತೀರುವಳಿಗೆ ಅವಕಾಶ ಕಲ್ಪಿಸಲಾಗಿದೆ. ಅದರಂತೆ, ವಿಶ್ವವಿದ್ಯಾಲಯದಲ್ಲಿ ಬಾಕಿ ಇರುವ ಕಂಡಿಕೆಗಳ ತೀರುವಳಿಗೆ ಸಂಬಂಧಿಸಿದಂತೆ ನಂತರ ಕ್ರಮವಹಿಸಲಾಗುವುದು.

ವಿಶ್ವವಿದ್ಯಾನಿಲಯದ 2020-21 ಮತ್ತು 2021-22ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ ಹಾಗೂ ಅನುಬಂಧಗಳನ್ನು ದಿನಾಂಕ 26.02.2024 ರಂದು ಜರುಗಲಿರುವ ಹಣಕಾಸು ಸಮಿತಿಯ ಮುಂದೆ ಮಂಡಿಸಲಾಗಿದ್ದು ಸಭೆ ಕೆಳಗಿನಂತೆ ಶಿಫಾರಸ್ಸು ಮಾಡಿರುತ್ತದೆ.

> 2020-21 ಹಾಗೂ 2021-22ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳ ಮೇಲೆ ಸಿದ್ಧಪಡಿಸಿದ ಅನುಪಾಲನಾ ವರದಿಗಳನ್ನು ಪರಿಶೀಲಿಸಿ ಸರ್ವಾನುಮತದ ಅನುಮೋದನೆ ನೀಡಿ ಪ್ರಾಧಿಕಾರಗಳಿಗೆ ಶಿಫಾರಸ್ಸು ಮಾಡಲು ಹಣಕಾಸು ಸಮಿತಿ ಒಪ್ಪಿಗೆ ನೀಡಿತು.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000ರ ಪ್ರಕರಣ 47(3) ರ ಪ್ರಕಾರ ಹಣಕಾಸು ಸಮಿತಿ ಅನುಮೋದಿಸಿರುವ ವಿಶ್ವವಿದ್ಯಾನಿಲಯದ 2020-21 ಮತ್ತು 2021-22ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿ ಹಾಗೂ ಹಣಕಾಸು ಸಮಿತಿ ಶಿಫಾರಸ್ಸುಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿದ್ಯಾವಿಷಯಕ ಪರಿಷತ್ ತೀರ್ಮಾನ:**

**ಹಣಕಾಸು ಸಮಿತಿ ಪರಿಶೀಲಿಸಿ ಶಿಫಾರಸ್ಸು ಮಾಡಿರುವ 2020-21 ಹಾಗೂ 2021-22ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಅನುಪಾಲನಾ ವರದಿಗಳಿಗೆ ಅನುಮೋದನೆ ನೀಡಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಲು ವಿದ್ಯಾವಿಷಯಕ ಪರಿಷತ್ ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ: 04

ವಿಷಯ: ಎಂ.ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯಕ್ಕೆ 2024-25 ಸಾಲಿನಿಂದ 2032-33ನೇ ಸಾಲಿನ ವರೆಗೆ ಹೊಸ ಸ್ವಾಯತ್ತ ಮಹಾವಿದ್ಯಾಲಯದ ಮಾನ್ಯತೆಯನ್ನು ಮಂಜೂರು ಮಾಡುವ ಕುರಿತು.

ಉಲ್ಲೇಖ:
1. ವಿಶ್ವವಿದ್ಯಾನಿಲಯಗಳ ಧನ ಸಹಾಯ ಅಯೋಗ ಪತ್ರ ಸಂ: F.2-10/ 2023 (Ac-Policy) Date: 26.09.2023
2. ಈ ಕಛೇರಿ ಪತ್ರ ಸಂಖ್ಯೆ: ಬೆಂ.ನ.ವಿ/ಎ.ಸಿ.ಎ/ಹೊಸಸ್ವಾಯತ್ತ/ 249/2023-24 ದಿನಾಂಕ: 11.12.2023
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪತ್ರ ಸಂಖ್ಯೆ: ಇಡಿ/440/ಯುಬಿವಿ /2023 ದಿನಾಂಕ: 29.01.2024

*****

***ಪರಮಾರ್ಶಕ ಟಿಪ್ಪಣಿ:***

ಉಲ್ಲೇಖಿತ (1)ರ ಪತ್ರದಲ್ಲಿ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗವು ಎಂ.ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯಕ್ಕೆ 2023-24ನೇ ಸಾಲಿನಿಂದ 2032-33ನೇ ಸಾಲಿನವರೆಗೆ 10 ವರ್ಷಗಳ ಅವಧಿಗೆ ಮಂಜೂರು ಮಾಡಿ ಅಧಿಸೂಚನೆ ಹೊರಡಿಸಲು ವಿಶ್ವವಿದ್ಯಾನಿಲಯಕ್ಕೆ ತಿಳಿಸಿರುತ್ತದೆ. ಉಲ್ಲೇಖ (2)ರ ಪತ್ರದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 64 ಹಾಗೂ ಸ್ವಾಯತ್ತ ಮಹಾವಿದ್ಯಾಲಯಗಳ ಪರಿನಿಯಮಾವಳಿ ಅನುಸಾರ, ಸದರಿ ಮಹಾವಿದ್ಯಾಲಯ ಸ್ವಾಯತ್ತ ಮಹಾವಿದ್ಯಾಲಯಕ್ಕೆ ಅಗತ್ಯವಾದ ಮಾನದಂಡಗಳ ಪ್ರಕಾರ ಮಹಾವಿದ್ಯಾಲಯ ಶೈಕ್ಷಣಿಕ ಹಾಗೂ ಭೌತಿಕ ಸಂಪನ್ಮೂಲಗಳನ್ನು ಹೊಂದಿರುವ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾದ ತಜ್ಞರ ಸಮಿತಿಯ ವರದಿಗಳನ್ನು ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಗಳ ಮುಂದೆ ಮಂಡಿಸಿ ಅನುಮೋದನೆ ಪಡೆದು ಸಮಿತಿಯ ವರದಿ ಹಾಗೂ ಪ್ರಾಧಿಕಾರ ನಡವಳಿಗಳೊಂದಿಗೆ ಸದರಿ ಮಹಾವಿದ್ಯಾಲಯಕ್ಕೆ ಹೊಸ ಸ್ವಾಯತ್ತತೆಯನ್ನು ನೀಡಲು ಸಹಮತ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಉಲ್ಲೇಖ (3)ರ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪತ್ರದಲ್ಲಿ, ಎಂ.ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಈಗಾಗಲೇ 2023-24ನೇ ಸಾಲಿನ ಪ್ರವೇಶಾತಿ ಪೂರ್ಣಗೊಂಡು ವ್ಯಾಸಂಗ ಅಂತಿಮ ಹಂತದಲ್ಲಿರುವುದರಿಂದ ಸದರಿ ಮಹಾವಿದ್ಯಾಲಯಕ್ಕೆ 2024-25ನೇ ಸಾಲಿನಿಂದ 2032-33ನೇ ಸಾಲಿನವರೆಗೆ 09 ವರ್ಷಗಳ ಅವಧಿಗೆ ಮಹಾವಿದ್ಯಾಲಯದಲ್ಲಿ ಅಸ್ತಿತ್ವದಲ್ಲಿರುವ ವ್ಯಾಸಂಗ ಕ್ರಮಗಳಿಗೆ ಅನ್ವಯಿಸುವಂತೆ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 64(1) ರಡಿ ಅಧಿಸೂಚನೆ ಹೊರಡಿಸಲು ಸಹಮತ ವ್ಯಕ್ತಪಡಿಸಿರುತ್ತಾರೆ.

ಸದರಿ ಮಹಾವಿದ್ಯಾಲಯದಲ್ಲಿ ಕೆಳಕಂಡ ವ್ಯಾಸಂಗ ಕ್ರಮಗಳು ಅಸ್ತಿತ್ವದಲ್ಲಿ ಇರುತ್ತವೆ.

| ಕ್ರ. ಸಂ | ವಿಷಯ | | ವಿದ್ಯಾರ್ಥಿ ಪ್ರಮಾಣ |
|---|---|---|---|
| 1. | BA | English | 80 |
| 2. | | Journalism | 80 |
| 3. | | Political Science | 40 |
| 4. | | Psychology | 40 |
| 5. | B.Sc | Genetics | 60 |
| 6. | | Mathematics | 40 |
| 7. | | Chemistry | 160 |
| 8. | B.Sc | Bio- Technology | 160 |

| | | | |
|---|---|---|---|
| 9. | | Bio- Chemistry | 60 |
| 10. | | Computer Science | 40 |
| 11. | | Electronics | 40 |
| 12. | | Micro- Biology | 220 |
| 13. | B.Com | General | 200 |
| 14. | BBA | General | 180 |
| 15. | BCA | General | 180 |
| 16. | M.Sc | Bio-Technology | 45 |
| 17. | M.Sc | Micro-Biology | 35 |
| 18. | M.Sc | Bio – Chemistry | 25 |
| 19. | M.Sc | Chemistry | 25 |
| 20. | M.Com | General | 40 |
| 21. | MBA | General | 60 |

ಮೇಲೆ ತಿಳಿಸಿರುವ ಕೋರ್ಸುಗಳಿಗೆ 2024–25ನೇ ಸಾಲಿನಿಂದ 2032–33ನೇ ಸಾಲಿನವರೆಗೆ 09 ವರ್ಷಗಳ ಅವಧಿಗೆ ಎಂ.ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯಕ್ಕೆ ಹೊಸ ಸ್ವಾಯತ್ತತೆಯನ್ನು ಮಂಜೂರಿಸಿ ಅಧಿಸೂಚನೆ ಹೊರಡಿಸಲು ವಿದ್ಯಾವಿಷಯಕ ಪರಿಷತ್ ಸಭೆಯ ಪರಿಶೀಲನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

***ವಿವರಣೆ:***

ಸದಸ್ಯರಾದ ಶ್ರೀ ಕೇಶವ ಪ್ರಸಾದ್ ರವರು ಸ್ವಾಯತ್ತ ಕಾಲೇಜುಗಳ ಪಠ್ಯಕ್ರಮ ಮತ್ತು ವಿಶ್ವವಿದ್ಯಾನಿಲಯ ಪಠ್ಯಕ್ರಮಗಳಲ್ಲಿ ವ್ಯತ್ಯಾಸ ಹಾಗೂ ಪಠ್ಯಕ್ರಮ ಸಿದ್ಧತೆ ಕುರಿತು ಮಾಹಿತಿ ಕೋರಿ, ಈ ಮಹಾವಿದ್ಯಾಲಯಗಳ ಪಠ್ಯಕ್ರಮದ ಕಾರಣದಿಂದ ವಿದ್ಯಾರ್ಥಿಗಳ ಭವಿಷ್ಯದಲ್ಲಿ ಉದ್ಯೋಗ ಪಡೆಯುವ ಹಾಗೂ ಉನ್ನತ ಶಿಕ್ಷಣಕ್ಕೆ ಆದ್ಯತೆ ಸಿಗುವ ಸಾಧ್ಯತೆ ಕುರಿತು ಈ ಮಾಹಿತಿ ಕೋರಿರುವುದಾಗಿ ತಿಳಿಸಿದರು.

ಕುಲಪತಿಗಳು ಮಾಹಿತಿ ನೀಡುತ್ತಾ, ಸ್ವಾಯತ್ತ ಮಹಾವಿದ್ಯಾಲಯಗಳು ತಮ್ಮದೆ ಆದ ಪಠ್ಯಕ್ರಮ ಹೊಂದಿರುತ್ತದೆ. ಪಠ್ಯಕ್ರಮಗಳನ್ನು ಸಿದ್ಧಪಡಿಸುವ ಅಧ್ಯಯನ ಮಂಡಳಿಗಳಲ್ಲಿ ವಿಶ್ವವಿದ್ಯಾನಿಲಯದ ಒಬ್ಬರು ಪ್ರತಿನಿಧಿ ಇರುತ್ತಾರೆ. ಪಠ್ಯಕ್ರಮಗಳ ಸುಧಾರಣೆ ಒಂದು ನಿರಂತರವಾಗಿ ನಡೆಯುವ ಪ್ರಕ್ರಿಯೆ ವಿಶ್ವವಿದ್ಯಾನಿಲಯಗಳು ಕೂಡ ಕಾಲಕಾಲಕ್ಕೆ ಪಠ್ಯಕ್ರಮ ಪರಿಷ್ಕರಿಸುತ್ತದೆ. ಅದರಂತೆ ಸ್ವಾಯತ್ತ ಮಹಾವಿದ್ಯಾಲಯಗಳು ಸಹ ಪಠ್ಯಕ್ರಮಗಳ ಪರಿಷ್ಕರಣೆ ಮಾಡುತ್ತಾರೆ. ಸ್ವಾಯತ್ತತೆ ಕಾರಣದಿಂದ, ಮಹಾವಿದ್ಯಾಲಯದವರು ಹೊಸ ಕೋರ್ಸು/ ವಿಷಯಗಳನ್ನು ಕೂಡಲೇ ಪ್ರಾರಂಭಿಸಲು ಸಾಧ್ಯವಾಗುತ್ತದೆ. ಕೋರ್ಸುಗಳ ಶೀರ್ಷಿಕೆಗಳು ಯು.ಜಿ.ಸಿ ಅನುಮೋದಿಸಿರುವ ಶೀರ್ಷಿಕೆಗಳ ಪ್ರಕಾರ ಇರುವುದನ್ನು ಕಡ್ಡಾಯಗೊಳಿಸಲಾಗಿದೆ. ಎಲ್ಲ ಸ್ವಾಯತ್ತ ಕಾಲೇಜುಗಳ ವಾರ್ಷಿಕ ಪರಿಶೀಲನೆ ಹಾಗೂ ಮೌಲ್ಯಾಂಕನವನ್ನು ತಜ್ಞರ ಸಮಿತಿಯಿಂದ ಮಾಡಿಸಿ, ಸಮಿತಿಯ ವರದಿಯನ್ನು ಪ್ರಾಧಿಕಾರಗಳ ಮುಂದೆ ಮಂಡಿಸಿ ಅನುಮೋದನೆ ಪಡೆದುಕೊಳ್ಳಲಾಗುವುದು ಎಂದು ಹೇಳಿದರು. ಸದಸ್ಯರಾದ ಡಾ. ವಿ. ಆರ್. ದೇವರಾಜ್‌ರವರು ಮಾಹಿತಿ ನೀಡುತ್ತಾ, ಸ್ವಾಯತ್ತ ಮಹಾವಿದ್ಯಾಲಯಗಳು ತಮ್ಮದೇ ಆದ ಪಠ್ಯಕ್ರಮ ಹೊಂದಿದ್ದರೂ ಒಟ್ಟಾರೆಯಾಗಿ ಯು.ಜಿ.ಸಿ.ಯವರ ಸಿದ್ಧಪಡಿಸುವ ಮಾದರಿ ಪಠ್ಯಕ್ರಮದಲ್ಲಿ 10% ವ್ಯತ್ಯಾಸದೊಂದಿಗೆ ಪಠ್ಯಕ್ರಮ ರಚಿಸಿಕೊಳ್ಳಲು

ಅವಕಾಶವಿದೆ. ಸ್ವಾಯತ್ತ ಕಾಲೇಜುಗಳ ಮತ್ತು ಇತರ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಾಮಾಜಿಕ / ಆರ್ಥಿಕ ಹಿನ್ನೆಲೆಯ ಕಾರಣದಿಂದ ಗುಣಮಟ್ಟ ಮತ್ತು ಪ್ರಸ್ತುತ ಪಡಿಸುವಿಕೆಯಲ್ಲಿ ವ್ಯಾತ್ಯಾಸವಾಗುವುದು ಸಹಜ ಹಾಗೂ ವಾಸ್ತವಿಕತೆ ಎಂದು ಹೇಳಿದರು.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ಎಂ.ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯಕ್ಕೆ ಯು.ಜಿ.ಸಿ ತೀರ್ಮಾನ ಹಾಗೂ ರಾಜ್ಯ ಸರ್ಕಾರದ ಸಹಮತ ನೀಡಿರುವುದನ್ನು ಪರಿಗಣಿಸಿ 2024-25 ಸಾಲಿನಿಂದ 2032-33ನೇ ಸಾಲಿನ 9 ವರ್ಷಗಳ ಅವಧಿಗೆ ಹೊಸ ಸ್ವಾಯತ್ತ ಮಹಾವಿದ್ಯಾಲಯದ ಮಾನ್ಯತೆ ನೀಡಲು ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಲು ವಿದ್ಯಾವಿಷಯ ಪರಿಷತ್ ಸಭೆ ಅನುಮೋದನೆ ನೀಡಿತು.**

**ವಿಷಯ ಸಂಖ್ಯೆ: 05**

ವಿಷಯ: ಸೆಂಟ್ ಜೋಸೆಫ್ ವಾಣಿಜ್ಯ ಮಹಾವಿದ್ಯಾಲಯಕ್ಕೆ ವಿಶ್ವವಿದ್ಯಾನಿಲಯಗಳ ಧನ ಸಹಾಯ ಆಯೋಗದ ತೀರ್ಮಾನದ ಪ್ರಕಾರ 2022-23ನೇ ಸಾಲಿನಿಂದ 2031-32ನೇ ಸಾಲಿನ ವರೆಗಿನ ಹತ್ತು ವರ್ಷಗಳ ಅವಧಿಗೆ ಸ್ವಾಯತ್ತ ಸ್ಥಾನಮಾನ ಅಧಿಸೂಚನೆ ಹೊರಡಿಸುವ ಕುರಿತು

ಉಲ್ಲೇಖ:
1. ವಿಶ್ವವಿದ್ಯಾನಿಲಯಗಳ ಧನ ಸಹಾಯ ಅಯೋಗ ಪತ್ರ ಸಂ: No. F.22 1/ 2022 (AC) 17th February, 2022
2. ಈ ಕಛೇರಿ ಪತ್ರ ಸಂಖ್ಯೆ: ಬೆಂ.ನ.ವಿ/ಸ್ವಾಯತ್ತ/ 192/2023-24 ದಿನಾಂಕ: 10.10.2023
3. ಸರ್ಕಾರದ ಅಧೀನ ಕಾರ್ಯದರ್ಶಿಗಳ ಪತ್ರ ಸಂಖ್ಯೆ: ಇಡಿ/543/ಯುಬಿವಿ /2022 ದಿನಾಂಕ: 12.01.2024

*****

***ಪರಮಾರ್ಶಕ ಟಿಪ್ಪಣಿ:***

ಉಲ್ಲೇಖಿತ (1)ರ ಪತ್ರದಲ್ಲಿ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗವು ಸೆಂಟ್ ಜೋಸೆಫ್ ವಾಣಿಜ್ಯ ಮಹಾವಿದ್ಯಾಲಯದ ಸ್ವಾಯತ್ತತೆಯನ್ನು 2022-23ನೇ ಸಾಲಿನಿಂದ 2031-32ನೇ ಸಾಲಿನವರೆಗೆ 10 ವರ್ಷಗಳ ಅವಧಿಗೆ ಮಂಜೂರು ಮಾಡಿರುತ್ತದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 64 ಹಾಗೂ ಸ್ವಾಯತ್ತ ಮಹಾವಿದ್ಯಾಲಯಗಳ ಪರಿನಿಯಮಾವಳಿ ಅನುಸಾರ, ಸದರಿ ಮಹಾವಿದ್ಯಾಲಯ ಸ್ವಾಯತ್ತ ಮಹಾವಿದ್ಯಾಲಯಕ್ಕೆ ಅಗತ್ಯವಾದ ಮಾನದಂಡಗಳ ಪ್ರಕಾರ ಶೈಕ್ಷಣಿಕ ಹಾಗೂ ಭೌತಿಕ ಸಂಪನ್ಮೂಲಗಳನ್ನು ಹೊಂದಿರುವ ಕುರಿತು ರಚಿಸಲಾದ ತಜ್ಞರ ಸಮಿತಿಯ ಶಿಫಾರಸ್ಸುಗಳನ್ನು ಸಲ್ಲಿಸಿ ಮತ್ತು ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಗಳ ನಡವಳಿಗಳೊಂದಿಗೆ ಸದರಿ ಮಹಾವಿದ್ಯಾಲಯಕ್ಕೆ ಸ್ವಾಯತ್ತತೆ ಮುಂದುವರೆಸಲು ಸಹಮತ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಉಲ್ಲೇಖ (3)ರ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪತ್ರದಲ್ಲಿ ಸೆಂಟ್ ಜೋಸೆಫ್ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಅಸ್ತಿತ್ವದಲ್ಲಿರುವ ವ್ಯಾಸಂಗ ಕ್ರಮಗಳಿಗೆ ಅನ್ವಯಿಸುವಂತೆ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 64(1) ರಡಿ ಅಧಿಸೂಚನೆ ಹೊರಡಿಸಲು ಸಹಮತ ವ್ಯಕ್ತಪಡಿಸಿರುತ್ತಾರೆ. ಸದರಿ ಮಹಾವಿದ್ಯಾಲಯದಲ್ಲಿ ಕೆಳಕಂಡ ವ್ಯಾಸಂಗ ಕ್ರಮಗಳು ಅಸ್ತಿತ್ವದಲ್ಲಿ ಇರುತ್ತವೆ.

| ಕ್ರ.ಸಂ | ವಿಷಯ | ವಿದ್ಯಾರ್ಥಿ ಪ್ರಮಾಣ |
|---|---|---|
| 1. | B.Com | 600 |
| 2. | B.Com (Travel & Tourism) | 90 |
| 3. | BBA | 300 |
| 4. | M.Com | 40 |
| 5. | M.Com (International Business) | 40 |
| 6. | M.Com (Finance Analysis) | 40 |
| 7. | B.A (English (Honours with Psychology) | 100 |
| 8. | B.Sc (Economics (Honours with Psychology) | 60 |

ಮೇಲೆ ತಿಳಿಸಿರುವ ಕೋರ್ಸುಗಳಿಗೆ 2022-23ನೇ ಸಾಲಿನಿಂದ 2031-32ನೇ ಸಾಲಿನವರೆಗೆ 10 ವರ್ಷಗಳ ಅವಧಿಗೆ ಸೆಂಟ್ ಜೋಸೆಫ್ ವಾಣಿಜ್ಯ ಮಹಾವಿದ್ಯಾಲಯಕ್ಕೆ ಸ್ವಾಯತ್ತತೆಯನ್ನು ಮುಂದುವರೆಸಿ ಅಧಿಸೂಚನೆ ಹೊರಡಿಸಲು ವಿದ್ಯಾವಿಷಯಕ ಪರಿಷತ್ ಸಭೆಯ ಪರಿಶೀಲನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ಸೆಂಟ್ ಜೋಸೆಫ್ ವಾಣಿಜ್ಯ ಮಹಾವಿದ್ಯಾಲಯಕ್ಕೆ ಯು.ಜಿ.ಸಿ ತೀರ್ಮಾನ ಹಾಗೂ ರಾಜ್ಯ ಸರ್ಕಾರದ ಸಹಮತ ನೀಡಿರುವುದನ್ನು ಪರಿಗಣಿಸಿ 2022-23 ಸಾಲಿನಿಂದ 2031-32ನೇ ಸಾಲಿನ 10 ವರ್ಷಗಳ ಅವಧಿಗೆ ಸ್ವಾಯತ್ತತೆ ಮುಂದುವರಿಕೆಗಾಗಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಲು ವಿದ್ಯಾವಿಷಯಕ ಪರಿಷತ್ ಸಭೆ ಅನುಮೋದನೆ ನೀಡಿತು.**

**ವಿಷಯ ಸಂಖ್ಯೆ: 06**

ವಿಷಯ: ಕುಲಾಧಿಪತಿಗಳಿಂದ ಅನುಮೋದನೆಗೊಂಡ "Statutes Relating to Appointment and Promotion of Teachers and Other Academic Staff and Measures for Maintenance of Standards in Higher Education in the Bengaluru City University, as per the UGC Regulations 2018" ಪರಿನಿಯಮಗಳನ್ನು ಅಧಿಸೂಚಿಸಿರುವ ಬಗ್ಗೆ

ಉಲ್ಲೇಖ:
1. ಉನ್ನತ ಶಿಕ್ಷಣ ಇಲಾಖೆ ಪತ್ರ ಸಂಖ್ಯೆ: ಇಡಿ489ಯುಬಿವಿ 2022, ದಿನಾಂಕ: 12.01.2024.
2. ವಿಶ್ವವಿದ್ಯಾನಿಲಯದಅಧಿಸೂಚನೆ ಸಂಖ್ಯೆ: BCU:RPS:S-TA&P:2023-24, Dated: 24.01.2024

*__ಪರಾಮರ್ಶಕ ಟಿಪ್ಪಣಿ:__*

ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಹೊಸದಾಗಿ ಮಂಜೂರಾಗಿರುವ ಬೋಧಕ ಹುದ್ದೆಗಳ ಕುರಿತಂತೆ ರಚಿಸಲಾಗಿರುವ ಕರಡು "Statutes Relating to Appointment and Promotion of Teachers and Other Academic Staff and Measures for Maintenance of Standards in

Higher Education in the Bengaluru City University, as per the UGC Regulations 2018" ಕರಡು ಪರಿನಿಯಮವನ್ನು ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಮೇಲ್ಕಂಡ ಪರಿನಿಯಮವಳಿಯನ್ನು ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ದಿನಾಂಕ: 02.01.2024 ರಂದು ಅನುಮೋದನೆ ನೀಡಿರುವುದಾಗಿ ಕುಲಾಧಿಪತಿಗಳಿಂದ ಅನುಮೋದಿಸಲ್ಪಟ್ಟ ಪರಿನಿಯಮಗಳ ಪ್ರತಿಯನ್ನು ಉಲ್ಲೇಖಿತ (1) ರ ಪತ್ರ ಮುಖೇನ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿರುತ್ತಾರೆ.

ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳಿಂದ ಅನುಮೋದಿಸಲ್ಪಟ್ಟ "Statutes Relating to Appointment and Promotion of Teachers and Other Academic Staff and Measures for Maintenance of Standards in Higher Education in the Bengaluru City University, as per the UGC Regulations 2018", ಪರಿನಿಯಮಗಳನ್ನು ಉಲ್ಲೇಖ (2) ರಅಧಿಸೂಚನೆಯ ಮುಖಾಂತರ ಅಧಿಸೂಚಿಸಲಾಗಿದೆ ಎಂಬ ಮಾಹಿತಿಯನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಯ ಗಮನಕ್ಕೆ ತರಲು ಮಂಡಿಸಿದೆ.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ಈ ಗೌರವಾನ್ವಿತ ಕುಲಾಧಿಪತಿಗಳು ಅಂಕಿತ ನೀಡಿದ ಪರಿನಿಯಮಗಳನ್ನು ಜಾರಿಗೊಳಿಸಿವ ಕ್ರಮವನ್ನು ಗಮನಿಸಿ ಅನುಮೋದಿಸಲಾಯಿತು.**

**ವಿಷಯ ಸಂಖ್ಯೆ: 07**

Sub: Making provision for pursuing P.G. Diploma course simultaneously along with Post Graduation Studies.

***REFERENCE NOTE***:

The Board of Studies in Commerce has prepared the Syllabus for the following Post Graduate Diploma Courses and the same have been approved by the Academic Council and notified. The Department of Commerce has started these 4 P.G. Diploma Courses from the Academic Year 2023-24.

P.G. Diploma in:

1. Business Administration
2. Human Resource Management
3. Marketing Management
4. Financial Management

The Dean of the faculty and Chairperson, Dept. of Commerce has submitted a proposal seeking permission to offer P.G. Diploma courses simultaneously along with the

Post Graduate Courses, so that the students will be equipped with an add on course. The regulation and the UGC guidelines provide for offering two progammes simultaneously in physical form, however the timings of these courses should not overlap.

The present UUCMS, portal does not allow simultaneous registration of two courses. A letter has been addressed to the Special Officer UUCMS to make provision for simultaneous registration of two courses. The reply is awaited.

In view of the provisions of Regulations and the UGC guidelines for pursuing two academic programmes simultaneously, the proposal of the Chairperson of Commerce Dept. is placed before the Academic Council for consideration and approval subject to making provision in the UUCMS Portal.

***ವಿವರಣೆ:***

ಪ್ರಸ್ತುತ ಪ್ರಸ್ತಾವನೆಯನ್ನು ವಿದ್ಯಾರ್ಥಿಗಳ ತಮ್ಮ ಪಿ.ಜಿ. ವ್ಯಾಸಂಗ ಮುಗಿಸುವುದರ ಜೊತೆಗೆ ಒಂದು ವೃತ್ತಿಪರ ವ್ಯಾಸಂಗದ ಡಿಪ್ಲೋಮ ಅರ್ಹತೆ ಹೊಂದಿ ಅವರಿಗೆ ಉದ್ಯೋಗ ದೊರೆಯುವಲ್ಲಿ ಅನುಕೂಲವಾಗುವ ದೃಷ್ಟಿಯಿಂದ ಹಾಗೂ ಕಲಿಕೆಯ ಜೊತೆಗೆ ಹೆಚ್ಚಿನ ನೈಪುಣ್ಯತೆ ಹೊಂದಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ ಎಂದು ವಾಣಿಜ್ಯ ನಿಕಾಯದ ಡೀನರು ಹೇಳಿದರು.

ಕುಲಪತಿಗಳು ಮಾಹಿತಿ ನೀಡುತ್ತಾ, ವಾಣಿಜ್ಯ ವಿಭಾಗದ ಅಧ್ಯಯನ ಮಂಡಳಿ ಪ್ರಸ್ತಾಪಿಸಿರುವ ಪಿ.ಜಿ. ವ್ಯಾಸಂಗದ ಜೊತೆಗೆ ಡಿಪ್ಲೋಮ ವ್ಯಾಸಂಗದ ಉದ್ದೇಶ ಉತ್ತಮವಾಗಿದೆ. ಅದರೆ ಇದರಲ್ಲಿ ಅಡಗಿರಬಹುದಾದ ಕಾನೂನಾತ್ಮಕ ಹಾಗೂ ಆಡಳಿತಾತ್ಮಕ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾದ ಅಗತ್ಯವಿದೆ ಎಂದು ಹೇಳಿದರು.

ವಿಶ್ವವಿದ್ಯಾನಿಲಯದ ಎಲ್ಲ ವ್ಯಾಸಂಗಗಳು ಯು.ಯು.ಸಿ.ಎಂ.ಎಸ್ ಪೋರ್ಟಲ್‌ನಲ್ಲಿ ಅಳವಡಿಕೆಯಾಗಬೇಕು. ಆದರೆ ಒಂದೇ ಸಲ 2 ಕೋರ್ಸುಗಳಿಗೆ ನೊಂದಣಿಯಾಗಲು ಸದ್ಯಕ್ಕೆ ಅವಕಾಶ ಕಲ್ಪಿಸುವುದಿಲ್ಲ. UGC Dual Degree ಗಾಗಿ ನಿಯಮಾವಳಿಗಳನ್ನು ರೂಪಿಸಿದ್ದರು. ಅದರಲ್ಲಿರುವ ನಿರ್ಬಂಧಗಳು ಕ್ಲಿಷ್ಟವಾಗಿದ್ದು, ಯುಜಿಸಿ ಪೂರ್ವಾನುಮೋದನೆ ನ್ಯಾಕ್ ಮಾನ್ಯತೆ ಇತ್ಯಾದಿಗಳು ಪ್ರಮುಖ ಅಡೆತಡೆಗಳಾಗಿವೆ.

ಈ ವ್ಯಾಸಂಗವನ್ನು ವಿಶ್ವವಿದ್ಯಾನಿಲಯ ಹಾಗೂ ಮಹಾವಿದ್ಯಾಲಯಗಳ ಎಲ್ಲ ಸ್ನಾತಕ ಪದವೀಧರರಿಗೆ ಮತ್ತು ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹಾಗೂ ಉದ್ಯಮ / ಕಾರ್ಪೋರೆಟ್ / ಸರ್ಕಾರಿ ಸೇವೆಯಲ್ಲಿರುವ ಉದ್ಯೋಗಿಗಳಿಗೆ ಅನ್ವಯಿಸುವ ಕುರಿತು ಪರಿಶೀಲಿಸಬೇಕು.

ಈ ಕೋರ್ಸು ವಾರಾಂತ್ಯ ಹಾಗೂ ಸಂಜೆ ಕೋರ್ಸಾಗಿ ನಡೆಸಬೇಕಾಗಬಹುದು ಅಂತಹ ಸಂದರ್ಭದಲ್ಲಿ ಸಮಯವನ್ನು ಹಾಗೂ ಸೂಕ್ತ ಶುಲ್ಕವನ್ನು ನಿಗದಿಪಡಿಸುವುದನ್ನು ಸಹ ಪರಿಗಣಿಸಬೇಕಾಗುತ್ತದೆ ಎಂದು ಹೇಳಿದರು.

ಸದಸ್ಯರಾದ ಪ್ರೊ. ವಿ.ಆರ್. ದೇವರಾಜ್ ರವರು ಸಹ ಮೇಲಿನ ಅನಿಸಿಕೆಗೆ ಸಹಮತ ವ್ಯಕ್ತಪಡಿಸಿ. ಈಗಾಗಲೇ ಇಂತಹ ಕೋರ್ಸುಗಳನ್ನು ಹಲವಾರು ಸಂಸ್ಥೆಗಳ ಆನ್‌ಲೈನ್ ಮಾದರಿಯಲ್ಲಿ ನೀಡುತ್ತಿದ್ದು, ನಾವು ನೀಡುವ ಕೋರ್ಸು ಉತ್ಕೃಷ್ಠ ಗುಣಮಟ್ಟದ್ದಾಗಿರಬೇಕು ಮತ್ತು ವಿಶ್ವಾಸಾರ್ಹವಾಗಿರಬೇಕು ಎಂದು ಸಲಹೆ ನೀಡಿದರು.

**ವಿದ್ಯಾವಿಷಯಕ ಪರಿಷತ್ ನಿರ್ಣಯ:**

**ಪ್ರಸ್ತಾಪಿಸಲಾದ ಪಿ.ಜಿ. ಡಿಪ್ಲೋಮ ವ್ಯಾಸಂಗಗಳನ್ನು ಪ್ರಾರಂಭಿಸಿದಲ್ಲಿ ಎದುರಿಸಬೇಕಾದ ಆಡಳಿತಾತ್ಮಕ, ತಾಂತ್ರಿಕ, ಕಾನೂನಾತ್ಮಕ ಸಂಗತಿಗಳನ್ನು ಪರಿಶೀಲಿಸಿ ವಿನಿಯಮ (Regulations)ಗಳನ್ನು ಸಿದ್ಧಪಡಿಸುವ ಅಥವಾ ಇರುವ ವಿನಿಯಮಗಳಿಗೆ ತಿದ್ದುಪಡಿ ತರುವ ಕುರಿತು ಪರಿಶೀಲಿಸಲು ಒಂದು ತಜ್ಞರ ಸಮಿತಿ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು. ಸಮಿತಿಯ ಶಿಫಾರಸ್ಸುಗಳನ್ನು "ಕಮಿಟಿ ಆಫ್ ಅಕಾಡೆಮಿಕ್ ಕೌನ್ಸಿಲ್" ಅನುಮೋದನೆ ಪಡೆದು ಜಾರಿಗೊಳಿಸಲು ಸಭೆ ಅನುಮತಿ ನೀಡಿತು. ವಾಣಿಜ್ಯ ಅಧ್ಯಯನ ಮಂಡಳಿಯ ಅಧ್ಯಕ್ಷರ ಪ್ರಯತ್ನ ಶ್ಲಾಘನೀಯವೆಂದು ಸಭೆ ಅಭಿಪ್ರಾಯ ಪಟ್ಟಿತು.**

**ವಿಷಯ ಸಂಖ್ಯೆ: 08**

**ವಿಷಯ:** Challenge Evaluation ಫಲಿತಾಂಶ ಪ್ರಕಟಿಸಿದ ನಂತರ ಉತ್ತರ ಪತ್ರಿಕೆಗಳ Photo Copy ಯನ್ನು ಒದಗಿಸುವಂತೆ ವಿದ್ಯಾರ್ಥಿಗಳು ಮಾಡಿರುವ ಮನವಿಯನ್ನು ಪರಿಗಣಿಸುವ ಕುರಿತು.

***ಪರಾಮರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು, ಇಬ್ಬರು ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸುತ್ತಿದ್ದು, ಫಲಿತಾಂಶಗಳನ್ನು ಸಕಾಲಕ್ಕೆ ನೀಡಲು ಕಷ್ಟಕರವಾಗಿದೆ. ಬಾಹ್ಯ ಮೌಲ್ಯಮಾಪಕರ ಕೊರತೆಯು ಅತಿಯಾಗಿದ್ದು, ಸಕಾಲದಲ್ಲಿ ಮೌಲ್ಯಮಾಪನ ಮಾಡಿಸಿ ಫಲಿತಾಂಶ ಪ್ರಕಟಿಸಲು ಬಹಳ ವಿಳಂಬವಾಗುತ್ತಿದೆ ಎಂದು ತಿಳಿಸಿ ವಿಶ್ವವಿದ್ಯಾಲಯವು ಮೌಲ್ಯಮಾಪನದ ಮಾನದಂಡಕ್ಕೆ ಚ್ಯುತಿ ಬಾರದಂತೆ, ಸಮ ಸಂಖ್ಯೆಯ ಸೆಮಿಸ್ಟರ್ ಉತ್ತರ ಪತ್ರಿಕೆಗಳನ್ನು ಇಬ್ಬರು ಮೌಲ್ಯಮಾಪಕರಿಂದ, ಮೌಲ್ಯಮಾಪನ ಮಾಡಿಸಿ ಹಾಗೂ ಬೆಸ ಸಂಖ್ಯೆ ಸೆಮಿಸ್ಟರ್‌ಗಳ ಉತ್ತರ ಪತ್ರಿಕೆಗಳನ್ನು ಆಂತರಿಕ ಅಥವಾ ಬಾಹ್ಯ ಮೌಲ್ಯಮಾಪಕರಲ್ಲಿ ಒಬ್ಬರಿಂದ ಮೌಲ್ಯಮಾಪನ ಮಾಡಿಸಿದಲ್ಲಿ, ಕಡಿಮೆ ಅವದಿಯಲ್ಲಿ ಫಲಿತಾಂಶವನ್ನು ಪ್ರಕಟಿಸಬಹುದಾಗಿರುತ್ತದೆ ಎಂದು ತಿಳಿಸಿ, ಇದನ್ನು ವಿಶ್ವವಿದ್ಯಾನಿಲಯದ ಪರೀಕ್ಷಾ ಕೈಪಿಡಿಯಲ್ಲಿ ಮಾರ್ಪಾಡು ಮಾಡಲು ವಿದ್ಯಾವಿಷಯಕ ಪರಿಷತಿನ ಮತ್ತು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಿ ಈ ಸಮಸ್ಯೆಗೆ ಪರಿಹಾರ

ಕಂಡುಕೊಳ್ಳಬೇಕೆಂದು, ಗೌರವಾನ್ವಿತ ವಿದ್ಯಾವಿಷಯಕ ಪರಿಷತಿನ ಸದಸ್ಯರಾದ ಡಾ. ವಿ. ಆರ್. ದೇವ್‌ರಾಜ್ ರವರು ಪ್ರಸ್ತಾವನೆ ಸಲ್ಲಿಸಿದ್ದರು.

ಈ ವಿಚಾರವನ್ನು ದಿನಾಂಕ 29.10.2022 ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಭೆಯ ಮುಂದೆ ಮಂಡಿಸಲಾಗಿತ್ತು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯವು, ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತರ ವ್ಯಾಸಂಗಗಳ ಪರಿನಿಯಮಗಳನ್ನು ಪಾಲನೆ ಮಾಡುತ್ತಿದ್ದು ಸದರಿ ಪರಿನಿಯಮದ ನಿಯಮ ಸಂಖ್ಯೆ 13.1 ಪ್ರಕಾರ ನಿಯಮಗಳನ್ನು ಪಾಲಿಸಬೇಕಾಗುತ್ತದೆ.

> 13.1. Each written paper shall be valued by one internal examiner and one external examiner. Each practical examination shall be jointly conducted and evaluated by one internal examiner and one external or two external examiners if there are no internal examiners. But not by two internal examiners.

ವಿದ್ಯಾವಿಷಯಕ ಪರಿಷತ್ತು, ಈ ವಿಷಯದಲ್ಲಿ ತಾಂತ್ರಿಕ, ಕಾನೂನಾತ್ಮಕ ಅಂಶಗಳನ್ನು ಪರಿನಿಯಮಗಳ ಅಡಿಯಲ್ಲಿ ಪರಿಶೀಲಿಸಿ ಪ್ರಸ್ತಾವನೆಯ ಸಾದಕ ಬಾದಕಗಳನ್ನು ಹಾಗೂ ಇವುಗಳಿಗೆ ಸಂಬಂದಿಸಿದಂತೆ ಪರಿನಿಯಮವಳಿಗಳನ್ನು ಗಮನಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಒಂದು ಸಮಿತಿಯನ್ನು ರಚಿಸಲು ಹಾಗೂ ಸಮಿತಿ ನೀಡುವ ಶಿಫಾರಸ್ಸುಗಳನ್ವಯ ಕ್ರಮ ವಹಿಸಲು ಕುಲಪತಿಗಳಿಗೆ ಅಧೀಕಾರ ನೀಡಲು ನಿರ್ಣಯ ತೆಗೆದುಕೊಂಡಿತ್ತು.

ಕುಲಸಚಿವರು (ಆಡಳಿತ) ಅವರ ಅಧ್ಯಕ್ಷತೆಯಲ್ಲಿ ಮೂರು ನಿಕಾಯಗಳ ಡೀನರುಗಳು ಮೂರು ಜನ ಸಿಂಡಿಕೇಟ್ ಸದಸ್ಯರು, ಹಾಗೂ ಒಬ್ಬರು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ಮತ್ತು ಕುಲಸಚಿವರು (ಮೌಲ್ಯಮಾಪನ) ಹಾಗೂ ವಿತ್ತಾಧಿಕಾರಿಗಳನ್ನು ಒಳಗೊಂಡ ಸಮಿತಿಯೊಂದನ್ನು ರಚಿಸಲಾಗಿತ್ತು. ಈ ಸಮಿತಿಯು ದಿನಾಂಕ 04.01.2023 ರಂದು ಸಭೆ ಸೇರಿ ವರದಿಯನ್ನು ಸಿದ್ಧಪಡಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿತ್ತು.

ಸಮಿತಿಯು ಈ ಕೆಳಕಂಡ ಶಿಫಾರಸುಗಳನ್ನು ಮಾಡಿತ್ತು

- ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ Double Valuation ಮತ್ತು Single Valuation ನ ಕುರಿತು ಚರ್ಚಿಸಲಾಯಿತು .
- ತದ್‌ರೂಪಿ ಛಾಯ ಪ್ರತಿ (Photo Copy) ಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗುವುದಿಲ್ಲವೆಂದು ತೀರ್ಮನಿಸಲಾಯಿತು.
- ತದ್‌ರೂಪಿ ಛಾಯ ಪ್ರತಿ (Photo Copy) ಗಳನ್ನು ವಿದ್ಯಾರ್ಥಿಗಳಿಗೆ ಪ್ರತ್ಯೇಕ ನಿಯಮಗಳನ್ನು ವಿಶ್ವವಿದ್ಯಾಲಯವು ರೂಪಿಸಿಕೊಳ್ಳುವ ತನಕ ವಿತರಿಸದಿರಲು ತೀರ್ಮಾನಿಸಿತು.
- ಇತರೆ ವಿಶ್ವವಿದ್ಯಾಲಯದಲ್ಲಿ ಮರುಮೌಲ್ಯಮಾಪನ ಮರುಪಾವತಿಗೆ ಸಂಬಂಧಿಸಿದಂತೆ 15 ಅಂಕಗಳ ಮತ್ತು ಅದಕ್ಕಿಂತ ಹೆಚ್ಚಿಗೆ ಪಡೆದಿದ್ದಲ್ಲಿ ಅಂತಹ ವಿದ್ಯಾರ್ಥಿಯು ಮರುಪಾವತಿಗೆ ಬ್ಯಾಂಕ್ ಖಾತೆಯ ವಿವರ, ಫಲಿತಾಂಶ ಅಂಕ ಪಟ್ಟಿ ಸಲ್ಲಿಸಲು ವಿದ್ಯಾರ್ಥಿಗೆ ತಿಳಿಸಲು ತೀರ್ಮಾನಿಸಲಾಯಿತು.
- UUCMS ನಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳಿಗೆ ಮಾತ್ರ ಮರುಮೌಲ್ಯಮಾಪನದ ಮರುಪಾವತಿಯ ನಿಯಮವು ಅನ್ವಯವಾಗುತ್ತದೆ.

2022–23ನೇ ಸಾಲಿನ ಸ್ನಾತಕೋತ್ತರ ಪದವಿಯ ಮರುಮೌಲ್ಯಮಾಪನದ ನಿಗಧಿ ಪಡಿಸಿದ ಶುಲ್ಕದ ಬಗ್ಗೆ ಕುಲಸಚಿವರು (ಮೌಲ್ಯಮಾಪನ) ಇವರಿಗೆ ಅಧಿಸೂಚನೆಯನ್ನು ಹೊರಡಿಸಲು ತಿಳಿಸಲಾಯಿತು.

ದಿನಾಂಕ: 29.10.2022 ಹಾಗೂ ದಿನಾಂಕ: 16.12.2022 ರಂದು ಜರುಗಿದ ಅಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಗಳ ನಡವಳಿಗಳ ಮೇಲೆ ಕೈಗೊಂಡ ಅನುಪಾಲನಾ ಸಭೆ ಪರಿಗಣಿಸಿ ಒಪ್ಪಿಗೆ ನೀಡಿತು.

ಸ್ನಾತಕೋತ್ತರ ಬೆಸ ಸಂಖ್ಯೆಯ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಒಬ್ಬರು ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸಿ, ಪ್ರಶ್ನೆವಾರು ಅಂಕಗಳನ್ನು ನೀಡುವ ವಿಧಾನವನ್ನು ಅಳವಡಿಸಿಕೊಂಡು ಹಾಗೂ ಪದವಿ ಕೋರ್ಸಿಗೆ ಅನ್ವಯವಾಗುವ ಶುಲ್ಕವನ್ನು ಪಡೆದು ಅಂತಹ ಉತ್ತರ ಪತ್ರಿಕೆಗಳ ಫೋಟೋ ಪ್ರತಿಗಳನ್ನು ನೀಡಲು ಹಾಗೂ ಮರು ಮೌಲ್ಯಮಾಪನಕ್ಕೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ಕ್ರಮವಹಿಸಲು ಸಭೆ ಒಪ್ಪಿಗೆ ನೀಡಿತು.

ವಿಷಯ ಪರಿಣಿತರ ಸಮಿತಿಯ ವರದಿ ಮತ್ತು ದಿನಾಂಕ: 29.10.2022 ಮತ್ತು 16.12.2022 ರಂದು ವಿದ್ಯಾವಿಷಯಕ ಪರಿಷತ್ ನಿರ್ಣಯದಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ದಿನಾಂಕ: 10.01.2023 ರಂದು ಸೂತ್ತೋಲೆಯನ್ನು ಹೊರಡಿಸಿತ್ತು, ಸೊತ್ತೋಲೆಯಲ್ಲಿ ಈ ಕೆಳಕಂಡಂತೆ ತಿಳಿಸಲಾಗಿದೆ.

1. ಸ್ನಾತಕೋತ್ತರ ವ್ಯಾಸಂಗದ 1, 3 ಮತ್ತು 5ನೇ ಸೆಮಿಸ್ಟರ್ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಇಬ್ಬರು ಮೌಲ್ಯಮಾಪಕರ ಬದಲಿಗೆ ಒಬ್ಬರು ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸುವ ಕುರಿತು.
   ಅರ್ಹತೆ ಹೊಂದಿದ ಸ್ನಾತಕೋತ್ತರ ಶಿಕ್ಷಕರ ಕೊರತೆಯ ಹಿನ್ನೆಲೆಯಲ್ಲಿ 1, 3 ಮತ್ತು 5ನೇ ಸೆಮಿಸ್ಟರ್ ಸ್ನಾತಕೊತ್ತರ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಆಂತರಿಕ ಅಥವಾ ಬಾಹ್ಯ ಪರೀಕ್ಷಕರಲ್ಲಿ ಒಬ್ಬರಿಂದ ಮೌಲ್ಯಮಾಪನ ಮಾಡಿಸಲು ಅನುಮತಿ ನೀಡಲಾಗಿದೆ. ಮೌಲ್ಯಮಾಪನ ಮಾಡುವ ಪರೀಕ್ಷಕರು ಸಂಬಂಧಿಸಿದ ಅಧ್ಯಯನ ಮಂಡಳಿ ಸಿದ್ಧಪಡಿಸುವ ಆಯಾಯ ಶಿಕ್ಷಕರು ಹೊಂದಿರುವ ವಿಶಿಷ್ಟ / ವಿಶೇಷ ಪಾಂಡಿತ್ಯದ ಪ್ರಕಾರ ಸಿದ್ಧಪಡಿಸಿದ ಸಮಗ್ರ ಪರೀಕ್ಷಕರ ಪಟ್ಟಿಯಿಂದ ಮಾತ್ರ ಆಯ್ಕೆ ಮಾಡಬೇಕೆಂದು ಸೂಚಿಸಲಾಗಿದೆ.

ಈಗ ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ದಿನಾಂಕ: 10.01.2023ರಲ್ಲಿ ಹೊರಡಿಸಿರುವ ಸೊತ್ತೊಲೆಯ ಪ್ರಕಾರ ಕಾರ್ಯ ನಿರ್ವಹಿಸುತ್ತಿದೆ. ದಿನಾಂಕ: 22.02.2024 ರಂದು ಕೆಲವು ಸಾತ್ನಕೋತ್ತರ ವಿದ್ಯಾರ್ಥಿಗಳು ಕುಲಸಚಿವರು (ಮೌ) ರವರಿಗೆ ಮನವಿ ಸಲ್ಲಿಸಿ ಮನವಿಯಲ್ಲಿ ಎರಡು ಬೇಡಿಕೆಗಳನ್ನು ತಿಳಿಸಿದ್ದಾರೆ:

1. ಸ್ನಾತಕೋತ್ತರ ಉತ್ತರ ಪತ್ರಿಕೆಗಳ ಚಾಲೆಂಜ್ ಮೌಲ್ಯಮಾಪನದಲ್ಲಿ ಪಡೆದ ಅಂಕಗಳನ್ನು ನೀಡುವಲ್ಲಿ ಅನುಸರಿಸುತ್ತಿರುವ ಸರಾಸರಿ ವಿಧಾನದ ಬದಲಾಗಿ ಅವರು ಪಡೆದ ಅಂಕಗಳನ್ನು ನೀಡುವುದು.
2. ಸ್ನಾತಕೋತ್ತರ ವ್ಯಾಸಂಗದ ಎಲ್ಲಾ ಸೆಮಿಸ್ಟರ್ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಫೋಟೋ ಕಾಫಿಗಳನ್ನು ನೀಡುವುದು.

ವಿದ್ಯಾರ್ಥಿಗಳು ಸಲ್ಲಿಸಿದ ಮನವಿಯ ಪ್ರತಿಯನ್ನು ಲಗತ್ತಿಸಿ ಮೇಲಿನ ವಿಷಯಗಳ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯ ಪರಿಗಣನೆ ಮತ್ತು ಸೂಕ್ತ ನಿರ್ಣಯಕ್ಕಾಗಿ ಮಂಡಿಸಿದೆ.

*ವಿವರಣೆ:*

ಕುಲಸಚಿವರು (ಮೌಲ್ಯಮಾಪನ) ರವರು ಪರಾಮರ್ಶಕ ಟಿಪ್ಪಣಿಯ ವಿವರಗಳನ್ನು ಸಭೆಗೆ ನೀಡಿ ಚಾಲ್ತಿಯಲ್ಲಿರುವ ವ್ಯವಸ್ಥೆ ಪ್ರಕಾರ I & III ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ಒಬ್ಬರು ಪರೀಕ್ಷಕರಿಂದ ಮೌಲ್ಯಮಾಪನ ಮಾಡಿಸುತ್ತಿದ್ದು, ಈ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಫೋಟೋ ಪ್ರತಿಗಳಿಗೆ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದಲ್ಲಿ ನೀಡಲಾಗುತ್ತದೆ. II & IV ಸೆಮಿಸ್ಟರ್ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಇಬ್ಬರು ಮೌಲ್ಯಮಾಪಕರು ಮೌಲ್ಯಮಾಪನ ಮಾಡುವುದರಿಂದ ಅವುಗಳ ಫೋಟೋ ಪ್ರತಿಗಳನ್ನು ನೀಡುವಂತಿಲ್ಲ. ವಿದ್ಯಾರ್ಥಿಗಳು ಎಲ್ಲ ಸೆಮಿಸ್ಟರ್ ಪೋಟೋ ಪ್ರತಿ ನೀಡುವಂತೆ ಹಾಗೂ ಚಾಲೇಂಜ್ ಮೌಲ್ಯಮಾಪನದ ನಂತರ ಪಡೆಯುವ ಅಂಕಗಳನ್ನು ಸರಾಸರಿ ಆಧಾರದ ಮೇಲೆ ನೀಡುವುದನ್ನು ಕೈಬಿಡುವಂತೆ ವಿನಂತಿಸಿದ್ದಾರೆ ಎಂದು ವಿವರಿಸಿದರು.

ಕುಲಪತಿಗಳು ಹೆಚ್ಚು ವಿವರಣೆ ನೀಡಿ ರಾಜ್ಯದ ಇತರ ವಿಶ್ವವಿದ್ಯಾಲಯಗಳ ಹಾಗೂ ನಮ್ಮ ವಿಶ್ವವಿದ್ಯಾನಿಲಯದ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಯಾವ ವ್ಯತ್ಯಾಸವಿಲ್ಲ. ಈ ವಿಶ್ವವಿದ್ಯಾನಿಲಯದಲ್ಲಿ ಖಾಯಂ ಬೋಧಕರು ಇಲ್ಲದೇ ಇರುವುದರಿಂದ ಬೇರೆ ವಿಶ್ವವಿದ್ಯಾಲಯಗಳ ಅಧ್ಯಾಪಕರ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದ್ದೇವೆ ಬೇರೆ ವಿಶ್ವವಿದ್ಯಾಲಯದ ಶಿಕ್ಷಕರು ತಮ್ಮ ವಿಶ್ವವಿದ್ಯಾಲಯದ ಕೆಲಸಕ್ಕೆ ಪ್ರಥಮ ಆದ್ಯತೆ, ನೀಡಿ ನಂತರ ನಮ್ಮ ವಿಶ್ವವಿದ್ಯಾನಿಲಯದ ಪರೀಕ್ಷಾ ಕೆಲಸಗಳಿಗೆ ಬರುತ್ತಾರೆ. ಹೀಗಾಗಿ ಮೌಲ್ಯಮಾಪನ ವಿಳಂಬವಾಗುತ್ತಿರುವುದರಿಂದ ಬೆಸ ಸಂಖ್ಯೆಯ ಸೆಮಿಸ್ಟರ್ ಉತ್ತರ ಪತ್ರಿಕೆಗಳನ್ನು ಒಬ್ಬರು ಪರೀಕ್ಷಕರಿಂದ ಹಾಗೂ ಸಮ ಸಂಖ್ಯೆಯ ಸೆಮಿಸ್ಟರ್ ಉತ್ತರ ಪತ್ರಿಕೆಗಳನ್ನು ಇಬ್ಬರು ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸಲಾಗುತ್ತಿದೆ. II & IV ಸೆಮಿಸ್ಟರ್ ಉತ್ತರ ಪತ್ರಿಕೆಗಳಲ್ಲಿ ಪರೀಕ್ಷಕರು ಯಾವುದೇ ಗುರುತು ಅಥವಾ ಅಂಕಗಳನ್ನು ದಾಖಲಿಸುವುದಿಲ್ಲ ಹೀಗಾಗಿ ಫೋಟೋ ಪ್ರತಿ ನೀಡಿದಲ್ಲಿ, ಅದರಲ್ಲಿ ಮೌಲ್ಯಮಾಪನದ ಮಾಡಿದ ವಿವಿರಗಳು ಇಲ್ಲದೇ ಇರುವುದರಿಂದ ಪೋಟೋ ಕಾಫಿ ಕೊಡುವ ಉದ್ದೇಶ ಸಫಲವಾಗುವುದಿಲ್ಲ. ಇಂತಹ ಉತ್ತರ ಪತ್ರಿಕೆಯ ಪೋಟೋ ಪ್ರತಿ ಪಡೆದು ಅವರ ಶಿಕ್ಷಕರಿಗೆ ತೋರಿಸಿ, ದೊರೆತಿರುವ ಒಟ್ಟಾರೆ ಅಂಕ ಸರಿ ಇರುವ ಕುರಿತು ಖಚಿತಪಡಿಸಿಕೊಳ್ಳುವ ಉದ್ದೇಶ ವಿದ್ಯಾರ್ಥಿಗಳು ಹೊಂದಿದಂತೆ ಕಂಡುಬರುತ್ತದೆ. ವಿಶ್ವವಿದ್ಯಾನಿಲಯ ಯಾವತ್ತೂ ವಿದ್ಯಾರ್ಥಿಗಳ ಹಿತದೃಷ್ಠಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಈ ಹಿನ್ನೆಲೆಯಲ್ಲಿ ಸದಸ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಬೇಕೆಂದು ಕೋರಿದರು.

ಪ್ರೊ. ವಿ. ಆರ್. ದೇವರಾಜ್ ರವರು ಇಬ್ಬರು ಪರೀಕ್ಷರು ಪ್ರಥಮ ಹಂತದಲ್ಲಿ ಮೌಲ್ಯಮಾಪನ ಮಾಡುವ ವಿದ್ಯಾರ್ಥಿಗಳ ಹಿತದೃಷ್ಠಿ ಗಮನದಲ್ಲಿಟ್ಟುಕೊಂಡು ಮೌಲ್ಯಾಂಕನ ಮಾಡಿರುತ್ತಾರೆ. ಅದರೆ ಚಾಲೇಂಜ್ ಮೌಲ್ಯಮಾಪನ ಮಾಡುವಾಗ ವಿದ್ಯಾರ್ಥಿ ಬರೆದಿರುವ ಉತ್ತರಗಳನ್ನು ಅಳೆದು ತೂಗಿ ಅಂಕಗಳನ್ನು ನೀಡುತ್ತಾರೆ. ಹೀಗಾಗಿ ಹಲವು ಸಂದರ್ಭಗಳಲ್ಲಿ ಚಾಲೇಂಜ್ ಮೌಲ್ಯಮಾಪನದಲ್ಲಿ ಮೊದಲು ದೊರೆತ ಅಂಕಗಳಿಗಿಂತ ಕಡಿಮೆಯಾಗುವ ಸಾಧ್ಯತೆ ಇದೆ. ಈ ಕಾರಣದಿಂದ ನಿಯಮಗಳ ಪ್ರಕಾರ ಸರಾಸರಿ ಅಂಕ ನೀಡಲಾಗುತ್ತದೆ, ಫೋಟೋ ಪ್ರತಿ ನೀಡುವುದು ಸಮಂಜಸವಲ್ಲವೆಂದು ಅಭಿಪ್ರಾಯಪಟ್ಟರು.

ಸದಸ್ಯರಾದ ಶ್ರೀ ಕೇಶವ ಪ್ರಸಾದ್ ರವರು ಯುಜಿಸಿ ನಿಯಮಗಳಲ್ಲಿ ಅವಕಾಶ ಇರುವುದನ್ನು ಪ್ರಸ್ತಾಪಿಸಿ, ವಿದ್ಯಾರ್ಥಿಗಳು ಕಾನೂನಾತ್ಮಕವಾಗಿ ಬೇಡಿಕೆ ಇಟ್ಟಿರುವುದನ್ನು ಪ್ರಸ್ತಾಪಿಸಿದರು.

ಸದಸ್ಯರಾದ ಶ್ರೀಮತಿ. ಡಿ. ಆರ್. ಸುಧಾ ಹಾಗೂ ಡಾ. ಎಲಿಝಾಬತ್ ಜಾಸ್ಮಿನ್ ರವರು ಅಭಿಪ್ರಾಯ ವ್ಯಕ್ತಪಡಿಸಿ ಉತ್ತರ ಪತ್ರಿಕೆಯ ಕೊನೆಯ ಪುಟದಲ್ಲಿ ಪರೀಕ್ಷಕರು ನೀಡಿರುವ ಅಂಕಗಳ ವಿವರಗಳನ್ನು ಹೊರತುಪಡಿಸಿ ಉತ್ತರ ಪತ್ರಿಕೆಯ ಪ್ರತಿಯನ್ನು ನೀಡಬಹುದೆಂದು ತಿಳಿಸಿದರು.

ಸದ್ಯರಾದ ಶ್ರೀ ರಮೇಶ್ ನಾರಾಯಣರಾವ್ ರವರು ನಿಯಮಾವಳಿಗಳ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಪ್ರಯತ್ನ ಮಾಡಬೇಕು ಎಂದು ಹೇಳಿದರು.

ಸದಸ್ಯರಾದ ಡಾ. ಎಸ್. ಹರಿಪ್ರಸಾದ್, ಡಾ ವಿ.ಆರ್. ದೇವರಾಜ್, ಡಾ.ಎಂ. ಪಾಂಡುರಂಗಪ್ಪನವರು ಮಾತನಾಡಿ, I & III ಸೆಮಿಸ್ಟರ್ ಪರೀಕ್ಷೆಗಳ ಉತ್ತರ ಪತ್ರಿಕೆ ಫೋಟೋ ಪ್ರತಿ ನೀಡಲಾಗುತ್ತಿದ್ದು II & IV ನೇ ಸೆಮಿಸ್ಟರ್ ಫೋಟೋ ಪ್ರತಿಗಳನ್ನು ನೀಡಲಾದ ಅಂಕಗಳ ಕೊನೆಯ ಪುಟವನ್ನು ಹೊರತುಪಡಿಸಿ ಉತ್ತರ ಪತ್ರಿಕೆಯ ಫೋಟೋ ಪ್ರತಿ ನೀಡುವ ಕುರಿತು ಪರಿಶೀಲಿಸಬೇಕೆಂದು ಹೇಳಿದರು, ಈ ವಿಭಾಗಗಳಲ್ಲಿ ಖಾಯಂ ಬೋಧಕ ಸಿಬ್ಬಂದಿಗಳು ಇದ್ದಿದರೆ, ವಿದ್ಯಾರ್ಥಿಗಳಿಗೆ ಸೂಕ್ತ ತಿಳುವಳಿಕೆ ನೀಡಲು ಸಾಧ್ಯವಾಗುತ್ತಿತ್ತು ಎಂದು ಹೇಳಿ ಉತ್ತರ ಪತ್ರಿಕೆಯ ಫೋಟೋ ಪ್ರತಿ ನೀಡುವುದರಿಂದ ಪರೀಕ್ಷಾ ವಿಭಾಗಕ್ಕೆ ಹೆಚ್ಚಿನ ಕೆಲಸದ ಹೊರೆಯಾಗುವುದರ ಜೊತೆಗೆ UUCMS ನಲ್ಲಿ ಆಗಬೇಕಾದ ಬದಲಾವಣೆಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದರು. ಪರೀಕ್ಷಾ ಫಲಿತಾಂಶ ಪ್ರಕಟಣೆಯ ಜೊತೆಗೆ ಅದೇ ಅಧಿಸೂಚನೆಯಲ್ಲಿ ಮರುಮೌಲ್ಯಮಾಪನ/ ಚಾಲೇಂಜ್ ಮೌಲ್ಯಾಮಾಪನಕ್ಕೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಪ್ರಕಟಿಸಬೇಕೆಂದು ತಿಳಿಸಿದರು.

ಅಂತಿಮವಾಗಿ ಕುಲಪತಿಗಳು ಈ ಕುರಿತು ಮಾತನಾಡಿ, ವಿದ್ಯಾರ್ಥಿಗಳು ತಾವು ಬರೆದ ಉತ್ತರ ಪತ್ರಿಕೆಗಳ ಪ್ರತಿಗಳನ್ನು ಪಡೆಯುವುದು ಅವರ ಹಕ್ಕು ಅದರಂತೆ, ಮರು ಮೌಲ್ಯಮಾಪನ ಅಥವಾ ಚಾಲೇಂಜ್ ಮೌಲ್ಯಮಾಪನಗಳ ಅಂಕಿಗಳನ್ನು ಪರಿಗಣಿಸುವಲ್ಲಿ ನಿಯಮಗಳ ಪ್ರಕಾರ ವಿದ್ಯಾರ್ಥಿಗಳ ಹಿತದೃಷ್ಠಿ ಗಮನದಲ್ಲಿರಿಸಿಕೊಂಡು ಅವರಿಗೆ ಅನುಕೂಲಕರವಾದ (Advantage) ಅಂಕಗಳನ್ನು ಪರಿಗಣಿಸಬೇಕಾಗುತ್ತದೆ ಎಂದು ತಿಳಿಸಿದರು. ನಿಯಮಾವಳಿಗಳಲ್ಲಿ ವಿದ್ಯಾರ್ಥಿಗಳಿಗೆ ಫೋಟೋ ಪ್ರತಿಗಳನ್ನು ನೀಡುವಲ್ಲಿ ಯಾವುದೇ ನಿರ್ಬಂಧವಿಲ್ಲ. ಈ ಪ್ರಾಧಿಕಾರ ಒಪ್ಪಿಗೆ ನೀಡಿದಲ್ಲಿ ಫೋಟೋ ಪ್ರತಿ ನೀಡಲು ಕ್ರಮವಹಿಸಬಹುದಾಗಿದೆ.

ವಿದ್ಯಾವಿಷಯಕ ಪರಿಷತ್ ನಿರ್ಣಯ:

1. **ಸುದೀರ್ಘ ಚರ್ಚೆಯ ನಂತರ ಸ್ನಾತಕೋತ್ತರ ವ್ಯಾಸಂಗದ ಎಲ್ಲಾ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಫೋಟೋ ಪ್ರತಿಗಳನ್ನು ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ನಿಗಧಿತ ಶುಲ್ಕ ಪಡೆದು ನೀಡಬೇಕೆಂದು ಸಭೆ ತೀರ್ಮಾನಿಸಿತು.**
2. **ಚಾಲೇಂಜ್ ಮೌಲ್ಯಮಾಪನದ ಅಂಕಗಳನ್ನು ನಿಗದಿಪಡಿಸುವಾಗ, ಪ್ರಥಮ ಮತ್ತು ದ್ವಿತೀಯ ಮೌಲ್ಯಮಾಪನದಲ್ಲಿ ಹೆಚ್ಚಿನ ಅಂಕಗಳಿಸಿದ ಮೌಲ್ಯಮಾಪನದ ಅಂಕಗಳೊಂದಿಗೆ ಚಾಲೇಂಜ್ ಮೌಲ್ಯಮಾಪನದ ಅಂಕಗಳನ್ನು ಸರಾಸರಿಗೊಳಿಸಿದ ನಂತರ ದೊರೆಯುವ ಅಂಕಗಳನ್ನು ಚಾಲೇಂಜ್ ಮೌಲ್ಯಮಾಪನದಲ್ಲಿ ವಿದ್ಯಾರ್ಥಿ ಗಳಿಸಿದ ಅಂಕಗಳೆಂದು ಪರಿಗಣಿಸಿ ಅದರ ಆಧಾರದ ಮೇಲೆ ಫಲಿತಾಂಶ ಪ್ರಕಟಿಸಬೇಕೆಂದು ಸಭೆ ತೀರ್ಮಾನಿಸಿತು.**
3. **ಫಲಿತಾಂಶ ಪ್ರಕಟಣೆಯ ಅಧಿಸೂಚನೆಯಲ್ಲಿ ಮೌಲ್ಯಮಾಪನ / ಚಾಲೇಂಜ್ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ನಿಗದಿಪಡಿಸಿ ಪ್ರಕಟಿಸಬೇಕೆಂದು ಸಭೆ ತೀರ್ಮಾನಿಸಿತು.**

**ವಿದ್ಯಾವಿಷಯಕ ಪರಿಷತ್ ಸಭೆಯ ನಂತರ ಸದಸ್ಯರು ವ್ಯಕ್ತಪಡಿಸಿದ ಆಡಳಿತಾತ್ಮಕ ವಿಷಯಗಳು:**

1. ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಹೆಸರು "ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯ" ಎಂದು ಹಲವಾರು ಕೇಂದ್ರೀಯ ಸಂಸ್ಥೆಗಳ ಅಂತರ್‌ಜಾಲದಲ್ಲಿ ಮುಂದುವರೆದಿದೆ. ಕೆಲವು ಸಂಸ್ಥೆಗಳು ಇನ್ನೂ ಹಿಂದಿನ ಹೆಸರನ್ನು ದಾಖಲೆಯಲ್ಲಿ ಮುಂದುವರೆಸಿವೆ ಎಂದು ಹೇಳಿದರು.
   **ಮಾಹಿತಿ:–** ಕುಲಪತಿಗಳು ಈಗಾಗಲೇ ಸರ್ಕಾರ ಪ್ರಕಟಿಸಿದ ಗೆಜೆಟ್ ಅಧಿಸೂಚನೆಯ ಪ್ರತಿ ನೀಡಿ ಎಲ್ಲಾ ಕೇಂದ್ರೀಯ ಸಂಸ್ಥೆಗಳಿಗೆ ಸೂಕ್ತ ಬದಲಾವಣೆ ಮಾಡಿಕೊಳ್ಳಲು ಕೋರಲಾಗಿದೆ. ಆದರೂ ಇನ್ನೊಮ್ಮೆ ಪತ್ರ ಬರೆಯಲಾಗುವುದು ಎಂದು ಕುಲಪತಿಗಳು ತಿಳಿಸಿದರು. (NAAC–AICTE–AISHE–National Scholarship Portal etc,…)

2. UUCMS ತಂತ್ರಾಂಶ ಮತ್ತು Scholarship Portal ಗಳಲ್ಲಿ ಸರಿಯಾದ ಹೊಂದಾಣಿಕೆ ಇಲ್ಲ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಪ್ರವೇಶ ಅನುಮೋದನೆ ಮಾಡಿದ ನಂತರ ವಿವರಗಳು Scholarship Portal ನಲ್ಲಿ ದಾಖಲೆ ಆಗುತ್ತಿಲ್ಲ. ಈ ದತ್ತಾಂಶಗಳು ಇಲ್ಲದೇ ಇರುವುದರಿಂದ ವಿದ್ಯಾರ್ಥಿಗಳು Scholarship ಗಳಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿದರು.
   **ಮಾಹಿತಿ:–**ಈ ಕುರಿತು UUCMS ಅಧಿಕಾರಿಗಳ ಗಮನಕ್ಕೆ ಈಗಾಗಲೇ ತರಲಾಗಿದೆ ಇನ್ನೊಮ್ಮೆ ಪತ್ರ ಬರೆಯಲಾಗುವುದು ಎಂದು ಕುಲಪತಿಗಳು ಹೇಳಿದರು.

3. ಬದಲಾದ ಸನ್ನಿವೇಶದಲ್ಲಿ ಪದವಿ ವ್ಯಾಸಂಗದ ಅವಧಿ 3 ವರ್ಷ ಅಥವಾ 4 ವರ್ಷ ಎನ್ನುವ ಕುರಿತು ಇದುವರೆಗೂ ಯಾವುದೇ ಸ್ಪಷ್ಟೀಕರಣವಿಲ್ಲ ಮಹಾವಿದ್ಯಾಲಯಗಳು ಅಗತ್ಯ ಸಿದ್ಧತೆ ಮಾಡಿಕೊಳ್ಳುವ ಅವಶ್ಯಕತೆ ಇರುವುದರಿಂದ ಬೇಗನೆ ಸ್ಪಷ್ಟತೆ ನೀಡಬೇಕೆಂದು ವಿನಂತಿಸಿದರು.
   **ಮಾಹಿತಿ:–**ಈ ಕುರಿತು ರಚಿಸಲಾದ ಕರ್ನಾಟಕ ರಾಜ್ಯ ಶಿಕ್ಷಣ ನೀತಿ ಆಯೋಗ ತನ್ನ ಮಧ್ಯಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಾಗಿ ತಿಳಿದು ಬಂದಿದೆ. ಸರ್ಕಾರದ ಅಂತಿಮ ತೀರ್ಮಾನ ಇದುವರೆಗೆ ದೊರೆಕಿರುವುದಿಲ್ಲ. ಅಂತಿಮವಾಗಿ ಸರ್ಕಾರ ತೆಗೆದುಕೊಳ್ಳುವ ತೀರ್ಮಾನ ಪಾಲಿಸಬೇಕಾಗಿರುವುದರಿಂದ ಸರ್ಕಾರದ ತೀರ್ಮಾನಕ್ಕಾಗಿ ಕಾಯಬೇಕಾಗುತ್ತದೆ ಎಂದು ಕುಲಪತಿಗಳು ತಿಳಿಸಿದರು.

4. UUCMS ಅಡಿಯಲ್ಲಿ ನಡೆಸಿದ ಯಾವ ಪರೀಕ್ಷೆಗಳ ಅಂಕ ಪಟ್ಟಿಗಳು ಇದುವರೆಗೂ ಕಾಲೇಜುಗಳಿಗೆ ತಲುಪಿರುವುದಿಲ್ಲ 6 ನೇ ಸೆಮಿಸ್ಟರ್ ಇಷ್ಟರಲ್ಲಿಯೇ ಪ್ರಾರಂಭವಾಗಬೇಕಾಗಿದ್ದು. 1 ರಿಂದ 5ನೇ ಸೆಮಿಸ್ಟರ್ ಅಂಕ ಪಟ್ಟಿಗಳು ಕುರಿತು ವಿದ್ಯಾರ್ಥಿಗಳು ಆತಂಕ ವ್ಯಕ್ತಪಡಿಸುತ್ತಿದ್ದಾರೆ ಎಂದು ಹೇಳಿದರು.
   **ಮಾಹಿತಿ:–** UUCMS ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದ್ದು ಕೆಲವೇ ದಿವಸಗಳಲ್ಲಿ ಅಂಕಪಟ್ಟಿಗಳ ಮುದ್ರಣ ಕುರಿತು ತಾಂತ್ರಿಕ ಅಡಚಣೆಗಳು ದೂರವಾಗಿ ಮುದ್ರಣವಾಗುವ ಸಾಧ್ಯತೆಗಳಿವೆ ಎಂದು ಕುಲಸಚಿವರು (ಮೌಲ್ಯಮಾಪನ) ರವರು ತಿಳಿಸಿದರು

5. ಪಿ.ಜಿ ಡಿಪ್ಲೋಮಾ ವ್ಯಾಸಂಗಗಳಿಗೆ ಶೈಕ್ಷಣಿಕ ವೇಳಾಪಟ್ಟಿ ನಿಗಧಿಪಡಿಸಬೇಕು–ಒಂದು ವರ್ಷದ ಪಿ.ಜಿ ಡಿಪ್ಲೋಮಾ ವ್ಯಾಸಂಗ ಎರಡು ವರ್ಷಗಳ ವರೆಗೆ ನಡೆಯುತ್ತಿದ್ದು ವಿದ್ಯಾರ್ಥಿಗಳಿಗೆ ಹಿನ್ನಡೆಯಾಗುತ್ತಿದೆ. ಇದನ್ನು ಪಿ.ಜಿ ವ್ಯಾಸಂಗಗಳ ಶೈಕ್ಷಣಿಕ ವೇಳಾ ಪಟ್ಟಿಯಲ್ಲಿ ಒಂದುಗೂಡಿಸಿ ಪ್ರಕಟಿಸಿದಲ್ಲಿ ಪ್ರಥಮ ವರ್ಷದ ವ್ಯಾಸಂಗದೊಂದಿಗೆ ಪಿ.ಜಿ ಡಿಪ್ಲೋಮಾ ವ್ಯಾಸಂಗ ಪೂರ್ಣಗೊಳ್ಳುತ್ತದೆ ಎಂದು ಹೇಳಿದರು.
   **ಮಾಹಿತಿ:–**ಈ ಕುರಿತು ಪರಿಶೀಲಿಸಿ ಸ್ನಾತಕೋತ್ತರ ವ್ಯಾಸಂಗಗಳ ಶೈಕ್ಷಣಿಕ ವೇಳಾಪಟ್ಟಿ ಜೊತೆಗೆ ಇದನ್ನು ಒಂದು ಗೂಡಿಸಿ ಪ್ರಕಟಿಸಲಾಗುವುದು ಎಂದು ಕುಲಪತಿಗಳು ತಿಳಿಸಿದರು.

6. ಸ್ನಾತಕೋತ್ತರ ಪರೀಕ್ಷೆಗಳು ಆಂತರಿಕ ಅಂಕಗಳನ್ನು ದಾಖಲಿಸಲು ಕೊನೆಯ ದಿನಾಂಕ ನಿಗಧಿಪಡಿಸಬೇಕು MBA ಮತ್ತು MCA ವ್ಯಾಸಂಗಗಳ ಪ್ರವೇಶಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಿರ್ವಹಿಸುವುದರಿಂದ, ಇತರ ಸ್ನಾತಕೋತ್ತರ ಕೋರ್ಸುಗಳಿಗೆ ಮತ್ತು MBA ಮತ್ತು MCA ಕೋರ್ಸುಗಳ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಹೊಂದಾಣಿಕೆಯಾಗುವುದಿಲ್ಲ. ಕಾರಣ ಪ್ರತ್ಯೇಕವಾದ ದಿನಾಂಕಗಳನ್ನು ನಿಗಧಿಪಡಿಸಲು ಕ್ರಮವಹಿಸಬೇಕೆಂದು ತಿಳಿಸಿದರು.

**ಮಾಹಿತಿ:-** ಈ ಕುರಿತು ಪರಿಶೀಲಿಸಿ ಅಗತ್ಯ ಕ್ರಮ ವಹಿಸಲಾಗುವುದು ಎಂದು ಸಭೆಗೆ ತಿಳಿಸಲಾಯಿತು.

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಳಿಸಲಾಯಿತು

**ಸಹಿ/-**
**ಕುಲಸಚಿವರು**
**ಸದಸ್ಯಕಾರ್ಯದರ್ಶಿಗಳು**

**ಸಹಿ/-**
**ಕುಲಪತಿಗಳು**
**ಸಭಾಧ್ಯಕ್ಷರು**

**ಕುಲಸಚಿವರು**
**ಬೆಂಗಳೂರು ನಗರ ವಿಶ್ವವಿದ್ಯಾನಿಲಯ**
**ಬೆಂಗಳೂರು**